ಪ್ರವಾದಿ ಚರಿತ್ರೆ

(ಭಾಗ-1)

ಮೂರನೆಯ ತರಗತಿ

ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ಪ್ರಾಥಮಿಕ ಮದ್ರಸಗಳ ಮೂರನೆಯ ತರಗತಿಯ ವಿದ್ಯಾರ್ಥಿಗಳಿಗಾಗಿ ಈ ಪುಸ್ತಕವನ್ನು ರಚಿಸಲಾಗಿದೆ. ಪ್ರವಾದಿಯವರ(ಸ) ಜನನದಿಂದ ಹಿಜ್ರತ್ ವರೆಗಿನ ಜೀವನ ಚರಿತ್ರೆ ಇದರಲ್ಲಿದೆ. ಚಿಕ್ಕ ಪಾಠಗಳಾಗಿರುವುದರಿಂದ ಇತಿಹಾಸದ ಘಟನೆಗಳನ್ನು ಬಹಳ ಸಂಕ್ಷಿಪ್ತ ಗೊಳಿಸಲಾಗಿದೆ. ಹೆಚ್ಚಿನ ವಿವರಗಳನ್ನು ಅಧ್ಯಾಪಕರು ತಿಳಿಸಬೇಕು. ಇತಿಹಾಸವು ಒಂದು ಪ್ರಮುಖ ವಿಷಯವಾಗಿರುವುದರಿಂದ ಮಕ್ಕಳಿಗೆ ಆಸಕ್ತಿ ಮೂಡಿಸುವ ರೀತಿಯಲ್ಲಿ ಪಾಠ ನಡೆಸಬೇಕು. ಕಥಾ ವಿವರಣೆಯ ವಿಧಾನವನ್ನು ಈ ಪ್ರಾಯದ ಮಕ್ಕಳು ಮೆಚ್ಚುತ್ತಾರೆ.

ಪ್ರತಿಯೊಂದು ಪಾಠದ ಮುಖ್ಯಾಂಶಗಳನ್ನು ಕಲಿಸಬೇಕು. ಪಾಠದ ವಾಕ್ಯಗಳನ್ನು ಯಥಾವತ್ತಾಗಿ ಉರು ಹೊಡೆಯುವುದಕ್ಕೆ ಪ್ರೋತ್ಸಾಹ ನೀಡಬಾರದು. ಇದರಿಂದ ಮಕ್ಕಳ ಬೌದ್ಧಿಕ ಬೆಳವಣಿಗೆ ಕುಂಠಿತವಾಗುತ್ತದೆ. ಪಾಠಗಳಲ್ಲಿ ಬರುವ ಅರಬಿ ಪದಗಳ ಉಚ್ಚಾರವನ್ನು ಮಕ್ಕಳಿಗೆ ಸರಿಯಾಗಿ ತಿಳಿಸಬೇಕು. ಅಲ್ಲಾಹನು ಈ ಕಿಂಚಿತ್ ಸೇವೆಯನ್ನು ಸತ್ಕರ್ಮವಾಗಿ ಸ್ವೀಕರಿಸಲಿ- ಆಮೀನ್.

✍ ಶಾಂತಿ ಪ್ರಕಾಶನ

ವಿಷಯ ಸೂಚಿ

1 ಮುಹಮ್ಮದರ(ಸ) ಜನನ

ಪ್ರವಾದಿ ಮುಹಮ್ಮದರ(ಸಲ್ಲಲ್ಲಾಹು ಅಲೈಹಿ ವ ಸಲ್ಲಮ್) ಕುರಿತು ನೀವು ಕೇಳಿರಬಹುದು. ಅವರು ಮಾನವರಿಗೆ ಅಲ್ಲಾಹನ ಆಜ್ಞೆಗಳನ್ನು ತಿಳಿಸಲಿಕ್ಕಾಗಿ ಬಂದ ಕೊನೆಯ ಪ್ರವಾದಿ. ಪ್ರವಾದಿವರ್ಯರ(ಸ) ಜನನ ಕಾಲದಲ್ಲಿ ಅರಬ್ ದೇಶವು ಬಹಳ ಕೆಟ್ಟಿತ್ತು. ಜನರು ಕಲ್ಲು ಮತ್ತು ಮರದಿಂದ ಪ್ರತಿಮೆಗಳನ್ನು ಮಾಡಿ ಪೂಜಿಸುತ್ತಿದ್ದರು. ಪ್ರವಾದಿ ಇಬ್‌ರಾಹೀಮರು(ಅ) ಕೇವಲ ಅಲ್ಲಾಹನ ಆರಾಧನೆಗಾಗಿ ಕಟ್ಟಿದ 'ಕಅಬಾ ಭವನ'ದಲ್ಲಿಯೂ ಆ ಜನರು ಪ್ರತಿಮೆಗಳನ್ನು ತುಂಬಿಸಿದ್ದರು. ಜನರು ಪರಸ್ಪರ ಕೊಲೆಗಳನ್ನು ಮಾಡುತ್ತಿದ್ದರು, ಕಳವು-ಸುಲಿಗೆಗಳನ್ನು ನಡೆಸುತ್ತಿದ್ದರು. ಮದ್ಯಪಾನ, ಜೂಜಾಟ ವ್ಯಾಪಕವಾಗಿತ್ತು. ಅನಾಥರನ್ನು ಪೀಡಿಸುತ್ತಿದ್ದರು. ಮಹಿಳೆಯರೊಡನೆ ಹೀನವಾಗಿ ವರ್ತಿಸುತ್ತಿದ್ದರು. ಹೆಣ್ಣು ಮಕ್ಕಳನ್ನು ಜೀವಂತ ಹೂಳುತ್ತಿದ್ದರು.

ಅಲ್ಲಾಹನು ಇಂತಹ ವಾತಾವರಣದಲ್ಲಿ ಲೋಕದ ಜನರಿಗೆ ಸನ್ಮಾರ್ಗ ತೋರಿಸಲಿಕ್ಕಾಗಿ ಪ್ರವಾದಿವರ್ಯರನ್ನು(ಸ) ಕಳುಹಿಸಿದನು. ಪ್ರವಾದಿ ಮುಹಮ್ಮದರು(ಸ) ಮಕ್ಕಾ ಎಂಬ ಊರಿನಲ್ಲಿ ಜನಿಸಿದರು. ಅವರ ತಂದೆಯ ಹೆಸರು ಅಬ್ದುಲ್ಲಾ ಮತ್ತು ತಾಯಿಯ ಹೆಸರು ಆಮಿನಾ. ಪ್ರವಾದಿವರ್ಯರು(ಸ) ಮಕ್ಕಾದ ಉನ್ನತ ಕುರೈಶಿ ಗೋತ್ರದ ಹಾಶಿಮ್ ಕುಟುಂಬದಲ್ಲಿ ಜನಿಸಿದರು. ಅವರ ತಂದೆ ಮತ್ತು ತಾಯಿ ಬಹಳ ಉತ್ತಮ ಗುಣನಡತೆಯವರಾಗಿದ್ದರು. ಜನರ ಪ್ರೀತಿಗೆ ಪಾತ್ರರಾಗಿದ್ದರು. ಕ್ರಿ. ಶ. 571ಎಪ್ರಿಲ್ 20ರ ಸೋಮವಾರ ದಿನ ಪ್ರವಾದಿವರ್ಯರು(ಸ) ಜನಿಸಿದರು. ಅವರು ಜನಿಸುವುದಕ್ಕಿಂತ ಮುಂಚೆ ಅವರ ತಂದೆ ನಿಧನರಾಗಿದ್ದುದರಿಂದ ಪ್ರವಾದಿವರ್ಯರು(ಸ) ಅನಾಥರಾಗಿ ಬೆಳೆದರು. ಹಾಗಿದ್ದರೂ ಪ್ರವಾದಿವರ್ಯರ(ಸ) ತಾತ ಅಬ್ದುಲ್ ಮುತ್ತಲೀಬ್ ಮಗುವಿನ ಪಾಲನೆ ಪೋಷಣೆಯ ಹೊಣೆಯನ್ನು ವಹಿಸಿದರು. ಅವರು ಪ್ರವಾದಿವರ್ಯರನ್ನು(ಸ) ಮುದ್ದಿನಿಂದ ಬೆಳೆಸಿದರು. ಅಬ್ದುಲ್ ಮುತ್ತಲೀಬರು ಮಗುವಿಗೆ 'ಮುಹಮ್ಮದ್' ಎಂಬ ಹೆಸರಿಟ್ಟರು. ಅಬ್ದುಲ್ ಮುತ್ತಲಿಬ್ ಕುರೈಶಿಗಳ ಮುಖಂಡರಾಗಿದ್ದು, ಜನರ ಗೌರವಕ್ಕೆ ಪಾತ್ರರಾಗಿದ್ದರು. ಅವರ ಮೊಮ್ಮಗನನ್ನೂ ಎಲ್ಲರೂ ಪ್ರೀತಿಸಿದರು. ಅಬ್ದುಲ್ ಮುತ್ತಲಿಬರು ಹೊರಗೆ ಹೋಗುವಾಗ ಮಗುವನ್ನೂ ತಮ್ಮ ಜೊತೆ ಕರೆದೊಯ್ಯುತ್ತಿದ್ದರು.

♦♦*♦*♦

2 ಹಲೀಮಾ(ರ)

ಮಕ್ಕಾದಲ್ಲಿ ಪುಟ್ಟ ಹಸುಳೆಗಳನ್ನು ಮೊಲೆಯೂಡಿಸುವುದಕ್ಕಾಗಿ ಸಾಕುತಾಯಂದಿರಿಗೆ ಒಪ್ಪಿಸುವ ರೂಢಿಯಿತ್ತು. ಹಳ್ಳಿ ಪ್ರದೇಶಗಳ ದಾದಿ ಮಹಿಳೆಯರು ಈ ಕಾರ್ಯವನ್ನು ವಹಿಸಿಕೊಳ್ಳುತ್ತಿದ್ದರು. ಶುದ್ಧ ಗಾಳಿ ಸೇವಿಸಿ, ಕಲಬೆರಕೆಯಿಲ್ಲದ ಭಾಷೆ ಮಾತಾಡಿ ಮಕ್ಕಳು ಉತ್ತಮ ರೀತಿಯಲ್ಲಿ ಬೆಳೆಯಲಿಕ್ಕಾಗಿ ಹಾಗೆ ಮಾಡುತ್ತಿದ್ದರು. ಈ ಸಾಕುತಾಯಂದಿರಿಗೆ ಹೇರಳ ಪ್ರತಿಫಲ ಮತ್ತು ಉಡುಗೊರೆಗಳನ್ನು ನೀಡುತ್ತಿದ್ದರು.

ಒಮ್ಮೆ ಹಸುಗೂಸುಗಳಿಗಾಗಿ ಬಂದ ಮಹಿಳೆಯರ ಗುಂಪಿನಲ್ಲಿ ಬನೂ ಸಅದ್ ಗೋತ್ರದ ಹಲೀಮಾ ಇದ್ದರು. ಪ್ರವಾದಿ ಮುಹಮ್ಮದರು(ಸ) ಅನಾಥರಾಗಿದ್ದುದರಿಂದ ಅವರನ್ನು ಸ್ವೀಕರಿಸಲು ಯಾರೂ ಒಪ್ಪಲಿಲ್ಲ. ಪ್ರತಿಫಲ ಮತ್ತು ಉಡುಗೊರೆ ಕಡಿಮೆಯಾದೀತೆಂಬ ಭೀತಿಯೇ ಅದಕ್ಕೆ ಕಾರಣವಾಗಿತ್ತು. ಆದರೆ ಹಲೀಮಾರಿಗೆ ಬೇರೆ ಯಾವ ಮಗುವೂ ಸಿಗಲಿಲ್ಲ. ಬರಿಗೈಯಲ್ಲಿ ಮನೆಗೆ ಹೋಗುವುದಕ್ಕಿಂತ ಈ ಮಗುವನ್ನು ಸ್ವೀಕರಿಸೋಣವೆಂದು ಭಾವಿಸಿ ಮುಹಮ್ಮದರನ್ನು(ಸ) ವಹಿಸಿಕೊಂಡರು. ಹೀಗೆ ಪ್ರವಾದಿವರ್ಯರಿಗೆ(ಸ) ಮೊಲೆಯೂಡಿಸುವ ಸೌಭಾಗ್ಯ ಹಲೀಮಾರಿಗೆ ದೊರೆಯಿತು. ಆಮಿನಾರು ಮುದ್ದು ಮಗುವನ್ನು ಅರೆಮನಸ್ಸಿನಿಂದ ಹಲೀಮಾರಿಗೆ ಒಪ್ಪಿಸಿದರು, ಮಗುವಿನ ಬಗ್ಗೆ ವಿಶೇಷ ಗಮನವಿರಿಸಬೇಕೆಂದು ವಿನಂತಿಸಿದರು. ನೀವು ಮಗುವಿನ ವಿಷಯದಲ್ಲಿ ಹೆದರಬೇಡಿ. ನನ್ನ ಸ್ವಂತ ಮಕ್ಕಳಿಗಿಂತ ಹೆಚ್ಚು ಪ್ರೀತಿಯಿಂದ ಅವನನ್ನು ಬೆಳೆಸುತ್ತೇನೆಂದು ಹಲೀಮಾ ಮಾತು ಕೊಟ್ಟರು.

ಪ್ರವಾದಿವರ್ಯರು(ಸ) ಹಲೀಮಾರ ಮನೆಯಲ್ಲಿ ಬಹಳ ಸಂತೋಷದಿಂದ ಬೆಳೆದರು. ಹಲೀಮಾರ ಮಕ್ಕಳೂ ಅವರೊಂದಿಗೆ ಅತಿ ವಾತ್ಸಲ್ಯದಿಂದ ಒಡನಾಡುತ್ತಿದ್ದರು. ಪ್ರವಾದಿವರ್ಯರ(ಸ) ಆಗಮನದಿಂದ ಹಲೀಮಾರ ಮನೆಯಲ್ಲಿ ಸಮೃದ್ಧಿ ಹೆಚ್ಚಿತು.

ಸುಖ ಸಂತೋಷ ಲಾಸ್ಯವಾಡಿತು. ಬುದ್ಧಿಶಕ್ತಿ ಮತ್ತು ಸ್ಮರಣಶಕ್ತಿಯಲ್ಲಿ ಪ್ರವಾದಿವರ್ಯರು(ಸ) ಸಾಮಾನ್ಯ ಮಕ್ಕಳನ್ನು ಮೀರಿಸಿದ್ದರು.

ಮಗುವಿನ ಕ್ಷೇಮ ಸಮಾಚಾರವನ್ನು ಹಲೀಮಾರು ಆಗಾಗ್ಗೆ ಆಮಿನಾರಿಗೆ ತಿಳಿಸುತ್ತಿದ್ದರು. ಎರಡು ವರ್ಷಗಳ ಬಳಿಕ ಮಗುವನ್ನು ಮಕ್ಕಾಕ್ಕೆ ಕರೆ ತಂದರು. ಮಗುವಿನ ಆರೋಗ್ಯ ಮತ್ತು ಬೆಳವಣಿಗೆಯನ್ನು ನೋಡಿ ಸಂತುಷ್ಟರಾದ ಆಮಿನಾರು ಹಲೀಮಾರಿಗೆ ಕೃತಜ್ಞತೆ ಹೇಳಿದರು. ಇನ್ನೂ ಕೆಲವು ಕಾಲ ಮಗುವನ್ನು ನೋಡಿಕೊಳ್ಳುವಂತೆ ಅವರಿಗೆ ತಿಳಿಸಿದರು. ಅಬ್ದುಲ್ ಮುತ್ತಲಿಬರು ಹಲೀಮಾರಿಗೆ ವಿಶೇಷ ಉಡುಗೊರೆಗಳನ್ನು ನೀಡಿದರು.

◆◆*◆*◆

3 ತಾಯಿ ಮತ್ತು ತಾತರ ನಿಧನ

ಮಗುವಿಗೆ ಐದು ವಯಸ್ಸು ಪ್ರಾಯವಾದಾಗ ಹಲೀಮಾರು ಅವರನ್ನು ತಾಯಿಗೆ ಹಿಂತಿರುಗಿಸಿದರು. ಮಗುವಿನ ಬೆಳವಣಿಗೆಯಿಂದ ಆಮಿನಾರಿಗೆ ತುಂಬಾ ಸಂತೋಷವಾಯಿತು. ಹಲೀಮಾ ಆಗಾಗ ತಮ್ಮ ಸಾಕು ಮಗನನ್ನು ನೋಡಲು ಬರುತ್ತಿದ್ದರು.

ಮಗುವಿಗೆ ಆರು ವಯಸ್ಸಾದಾಗ ಆಮಿನಾ ಒಮ್ಮೆ ಮಗನನ್ನು ಕರೆದುಕೊಂಡು ಮದೀನಾದಲ್ಲಿರುವ ತಮ್ಮ ಸಂಬಂಧಿಕರ ಬಳಿಗೆ ಹೋದರು. ಜತೆಯಲ್ಲಿ ಉಮ್ಮು ಐಮನ್ ಎಂಬ ಸೇವಕಿಯೂ ಇದ್ದರು. ಮದೀನಾದಲ್ಲಿ 'ಬನೂ ನಜ್ಜಾರ್' ಗೋತ್ರದ ಸಂಬಂಧಿಕರೊಡನೆ ಕೆಲವು ದಿನ ತಂಗಿದ ಬಳಿಕ ಆಮಿನಾ ಮಕ್ಕಾಕ್ಕೆ ಮರಳಿದರು. ದಾರಿ ಮಧ್ಯದಲ್ಲಿ 'ಅಬವಾಅ್' ಎಂಬ ಸ್ಥಳಕ್ಕೆ ತಲಪಿದಾಗ ಹಠಾತ್ತನೆ ಅವರ ಆರೋಗ್ಯ ಕೆಟ್ಟಿತು. ಅವರು ಅಲ್ಲಿಯೇ ಮರಣ ಹೊಂದಿದರು.

ಬಾಲಕ ಮುಹಮ್ಮದ್(ಸ) ಮತ್ತು ಉಮ್ಮು ಐಮನ್ ದುಃಖಿತರಾಗಿ ಮಕ್ಕಾಕ್ಕೆ ಮರಳಿದರು. ತಾಯಿಯ ಮರಣದಿಂದ ಪ್ರವಾದಿವರ್ಯರು(ಸ) ಸಂಪೂರ್ಣ ಯತೀಮ್(ಅನಾಥ) ಆದರು.

ತಾತ ಅಬ್ದುಲ್ ಮುತ್ತಲಿಬ್‌ರು ಮಗನನ್ನು ಅತಿಯಾಗಿ ಪ್ರೀತಿಸುತ್ತಿದ್ದರು. ತಂದೆ-ತಾಯಿಯಿಲ್ಲದ ಕೊರಗಿನಿಂದ ಮಗು ಬಳಲದಂತೆ ಅವರು ಜಾಗ್ರತೆ ವಹಿಸಿದರು. ಎಲ್ಲ ಸಂದರ್ಭಗಳಲ್ಲಿಯೂ ತಮ್ಮ ಜತೆ ಅವರನ್ನು ಕರೆದೊಯ್ಯುತ್ತಿದ್ದರು. ತನ್ನ ಮಕ್ಕಳಿಗೂ ಕುಳಿತುಕೊಳ್ಳಲು ಬಿಡದ ಹಾಸಿಗೆಯಲ್ಲಿ ಮುಹಮ್ಮದ್‌ರನ್ನು(ಸ) ಕುಳ್ಳಿರಿಸುತ್ತಿದ್ದರು. ಆದರೆ, ಆ ಉತ್ತಮ ದಿನಗಳು ಹೆಚ್ಚು ಕಾಲ ಉಳಿಯಲಿಲ್ಲ. ಪ್ರವಾದಿವರ್ಯರಿಗೆ(ಸ) ಎಂಟು ವಯಸ್ಸಾದಾಗ ಅಬ್ದುಲ್ ಮುತ್ತಲಿಬ್ ನಿಧನರಾದರು. ನಿಧನದ ವೇಳೆ ಅವರು ಮೊಮ್ಮಗನ ಚಿಂತೆಯಲ್ಲಿದ್ದರು. ಮಗ ಅಬೂತಾಲಿಬ್‌ರನ್ನು ಕರೆಸಿ, ಮಗುವನ್ನು ಚೆನ್ನಾಗಿ ನೋಡಿಕೊಳ್ಳ ಬೇಕೆಂದು ಉಪದೇಶಿಸಿದ ಬಳಿಕವೇ ಅವರು ಕಣ್ಣು ಮುಚ್ಚಿದರು. ಅಬೂತಾಲಿಬ್‌ರು ಈ ವಾಗ್ದಾನವನ್ನು ತಪ್ಪದೆ ಪಾಲಿಸಿದರು. ತನ್ನ ಮಕ್ಕಳಿಗಿಂತ ಹೆಚ್ಚು ಪ್ರೀತಿಯಿಂದ ಪ್ರವಾದಿವರ್ಯರನ್ನು(ಸ) ಬೆಳೆಸಿದರು. ತನ್ನ ಮರಣದ ತನಕ ಪ್ರವಾದಿವರ್ಯರನ್ನು(ಸ) ಸಂರಕ್ಷಿಸಿದರು.

◆◆*◆*◆

4 ಪ್ರವಾದಿವರ್ಯರ(ಸ) ಬಾಲ್ಯ

ಪ್ರವಾದಿವರ್ಯರು(ಸ) ಚಿಕ್ಕಂದಿನಲ್ಲೇ ಉತ್ತಮ ಗುಣಗಳನ್ನು ಬೆಳೆಸಿ ಕೊಂಡಿದ್ದರು. ಇತರ ಮಕ್ಕಳಂತೆ ತುಂಟತನ ಅಥವಾ ದುರ್ಗುಣಗಳಿರಲಿಲ್ಲ. ಕೆಟ್ಟ ಕೆಲಸಗಳನ್ನು ಮಾಡುತ್ತಿರಲಿಲ್ಲ. ಕೆಟ್ಟ ಮಾತುಗಳನ್ನು ಆಡುತ್ತಿರಲಿಲ್ಲ. ಕಿರಿಯರನ್ನು ಪ್ರೀತಿಸುತ್ತಿದ್ದರು. ಹಿರಿಯರನ್ನು ಗೌರವಿಸುತ್ತಿದ್ದರು. ಬಡವರು ಮತ್ತು ಸಂಕಷ್ಟಕ್ಕೊಳಗಾದವರಿಗೆ ಅನುಕಂಪ ತೋರಿಸುತ್ತಿದ್ದರು. ತಮ್ಮ ಕೈಯಲ್ಲಾದಷ್ಟು ಸಹಾಯ ಸಹಕಾರಗಳನ್ನು ನೀಡುತ್ತಿದ್ದರು. ಆದ್ದರಿಂದ ಊರಿನವರು ಪ್ರವಾದಿ ವರ್ಯರನ್ನು(ಸ) ಬಹಳವಾಗಿ ಪ್ರೀತಿಸುತ್ತಿದ್ದರು. ಮುಹಮ್ಮದ್‌ರಂತಹ ಒಂದು ಮಗುವಿರಬೇಕೆಂದು ಎಲ್ಲಾ ತಾಯಂದಿರೂ ಆಸೆ ಪಡುತ್ತಿದ್ದರು.

ಪ್ರವಾದಿವರ್ಯರು(ಸ) ಚಿಕ್ಕಂದಿನಲ್ಲಿ ಆಡುಗಳನ್ನು ಮೇಯಿಸುತ್ತಿದ್ದರು. ಹಿಂದಿನ ಅನೇಕ ಪ್ರವಾದಿಗಳು ಆಡುಗಳನ್ನು ಮೇಯಿಸಿದ್ದರು. ಅದರಿಂದಾಗಿ ಪ್ರಾಣಿ ದಯೆ, ಕರುಣೆ ಹೆಚ್ಚುತ್ತದೆ. ಸಹನೆ, ಸೌಮ್ಯತೆ ಮುಂತಾದ ಗುಣಗಳು ಬೆಳೆಯುತ್ತವೆ.

ಪ್ರವಾದಿವರ್ಯರು(ಸ) 12 ವಯಸ್ಸಿನ ಬಾಲಕರಾಗಿದ್ದಾಗ ಒಮ್ಮೆ ಅಬೂತಾಲಿಬ್‌ರು ಸಿರಿಯಾ ದೇಶಕ್ಕೆ ವ್ಯಾಪಾರಕ್ಕಾಗಿ ಹೋಗಲು ನಿರ್ಧರಿಸಿದರು. ಪ್ರವಾದಿವರ್ಯರೂ(ಸ) ಅವರ ಸಂಗಡ ಹೋಗ ಬಯಸಿದರು. ಹನ್ನೆರಡು ವಯಸ್ಸಿನ ಬಾಲಕನನ್ನು ಅಷ್ಟೊಂದು ದೂರದ ಯಾತ್ರೆಗೆ ಕರೆದೊಯ್ಯುವುದು ಬಹಳ ಕಷ್ಟದ ಕೆಲಸವಾಗಿತ್ತು. ಹಾಗಿದ್ದರೂ ಅಬೂತಾಲಿಬ್ ಬೇಡವೆನ್ನಲಿಲ್ಲ. ಅವರು ಪ್ರವಾದಿವರ್ಯರ(ಸ) ಮನ ನೋಯಿಸಲು ಇಷ್ಟ ಪಡಲಿಲ್ಲ.

ಅಬೂತಾಲಿಬ್‌ರ ಯಾತ್ರಾ ತಂಡವು 'ಬುಸ್ರಾ' ಎಂಬ ಸ್ಥಳಕ್ಕೆ ತಲಪಿತು. ಆಗ ಅಲ್ಲಿನ 'ಬಹೀರಾ' ಎಂಬೋರ್ವ ಕ್ರೈಸ್ತ ಗುರು ಪ್ರವಾದಿವರ್ಯರನ್ನು(ಸ) ನೋಡಿದರು. ಬಹೀರಾರು ಹಿಂದಿನ ವೇದಗ್ರಂಥಗಳನ್ನು ಓದಿ, ಅಂತಿಮ ಪ್ರವಾದಿಯ

ಎಲ್ಲಾ ಲಕ್ಷಣಗಳನ್ನೂ ತಿಳಿದುಕೊಂಡಿದ್ದರು. ಪ್ರವಾದಿವರ್ಯರ(ಸ) ರೂಪ ಮತ್ತು ಸ್ವಭಾವವನ್ನು ಗಮನಿಸಿದ ಬಹೀರಾರಿಗೆ, ಇವರೇ ಆ ಪ್ರವಾದಿಯೆಂದು ಖಚಿತವಾಯಿತು. ಬಾಲಕನ ಗುಣ-ನಡತೆ ಮತ್ತು ಕೌಟುಂಬಿಕ ಹಿನ್ನೆಲೆಗಳನ್ನು ಅವರು ಕೇಳಿ ತಿಳಿದುಕೊಂಡರು. ತರುವಾಯ ಅಬೂತಾಲಿಬ್‌ರಿಗೆ ಈ ವಿಷಯ ತಿಳಿಸಿ, ಬಾಲಕನನ್ನು ಚೆನ್ನಾಗಿ ನೋಡಿಕೊಳ್ಳಬೇಕೆಂದು ಉಪದೇಶಿಸಿದರು. ಯಹೂದಿಯರಂತಹ ವೈರಿಗಳು ಬಾಲಕನನ್ನು ಕೊಲ್ಲಬಹುದೆಂದು ಎಚ್ಚರಿಕೆ ನೀಡಿದರು. ಅಬೂತಾಲಿಬ್ ಬೇಗನೆ ವ್ಯಾಪಾರ ಮುಗಿಸಿ ಮಕ್ಕಾಕ್ಕೆ ಮರಳಿದರು.

♦♦*♦*♦

5 ವಿವಾಹ

ಪ್ರವಾದಿವರ್ಯರು(ಸ) ಅಬೂತಾಲಿಬರ ಪೋಷಣೆಯಲ್ಲಿ ಬೆಳೆದು ಯುವಕರಾದರು. ಅಬೂತಾಲಿಬ್ ಒಂದು ದೊಡ್ಡ ಕುಟುಂಬದ ಹೊಣೆಯನ್ನು ವಹಿಸಬೇಕಾಗಿತ್ತು. ಆದುದರಿಂದ ಪ್ರವಾದಿವರ್ಯರೂ(ಸ) ಏನಾದರೂ ಕೆಲಸ ಮಾಡಿ ಅವರಿಗೆ ಸಹಾಯ ಮಾಡುತ್ತಿದ್ದರು. ಹೀಗಿರಲು, ಮಕ್ಕಾದ ಶ್ರೀಮಂತ ಮಹಿಳೆ ಖದೀಜಾರಿಗೆ ವ್ಯಾಪಾರ ವ್ಯವಹಾರಗಳಲ್ಲಿ ನೆರವಿಗಾಗಿ ಓರ್ವ ಸಮರ್ಥ ಹಾಗೂ ನಂಬಿಗಸ್ಥ ಸಹಾಯಕನ ಅಗತ್ಯ ಬಿತ್ತು. ಪ್ರವಾದಿವರ್ಯರ(ಸ) ಗುಣ-ನಡತೆ ಮತ್ತು ಪ್ರಾಮಾಣಿಕತೆಯ ಕುರಿತು ಕೇಳಿ ಅರಿತಿದ್ದ ಖದೀಜಾರು ಪ್ರವಾದಿವರ್ಯರನ್ನು(ಸ) ಕರೆಸಿ ತಮ್ಮ ವ್ಯಾಪಾರೀ ತಂಡದ ನಾಯಕರಾಗಿ ಸಿರಿಯಾಕ್ಕೆ ಕಳುಹಿಸಿದ್ದರು. ಈ ವ್ಯಾಪಾರದಲ್ಲಿ ಹಿಂದೆಂದೂ ದೊರೆತಿರದಷ್ಟು ಲಾಭವಾಯಿತು. ಪ್ರವಾದಿವರ್ಯರ(ಸ) ಗುಣ-ನಡತೆ ಮತ್ತು ವ್ಯವಹಾರ ಮೈಸರರಿಗೆ ತುಂಬಾ ಇಷ್ಟವಾಯಿತು. ಮಕ್ಕಾಕ್ಕೆ ಮರಳಿದ ಬಳಿಕ ಒಡತಿಗೆ ಈ ವಿಷಯವನ್ನು ತಿಳಿಸಿದರು. ಇದರಿಂದ ಖದೀಜಾರಿಗೆ ಪ್ರವಾದಿವರ್ಯರ(ಸ) ಬಗ್ಗೆ ಬಹಳ ಅಭಿಮಾನವುಂಟಾಯಿತು. ಅವರಿಗೆ ನಿಗದಿ ಪಡಿಸಿದ್ದಕ್ಕಿಂತ ಹೆಚ್ಚು ಪ್ರತಿಫಲವನ್ನು ನೀಡಿದರು.

ಆಗ ಖದೀಜಾ ನಲ್ವತ್ತು ವಯಸ್ಸಿನ ವಿಧವೆಯಾಗಿದ್ದರು. ಅನೇಕ ಗಣ್ಯರು ಅವರ ಮರುವಿವಾಹದ ಪ್ರಸ್ತಾಪವೆತ್ತಿದರೂ ಅವರು ಒಪ್ಪಿರಲಿಲ್ಲ. ಅವರು ಪ್ರವಾದಿವರ್ಯರನ್ನು(ಸ) ವಿವಾಹವಾಗ ಬಯಸಿದರು. ಈ ಬಯಕೆಯನ್ನು ಓರ್ವ ಗೆಳತಿಯ ಮೂಲಕ ಪ್ರವಾದಿವರ್ಯರಿಗೆ(ಸ) ತಿಳಿಸಿದರು. ಪ್ರವಾದಿವರ್ಯರು(ಸ) ಅಬೂತಾಲಿಬ್‌ರೊಂದಿಗೆ ಸಮಾಲೋಚಿಸಿದರು. ಅಬೂತಾಲಿಬ್ ಆ ನೆಂಟಸ್ತಿಕೆಯನ್ನು ಅನುಮೋದಿಸಿದರು. ಹೀಗೆ ಪ್ರವಾದಿವರ್ಯರ(ಸ) ಮತ್ತು ಖದೀಜಾರ ವಿವಾಹ ನೆರವೇರಿತು. ಆಗ ಪ್ರವಾದಿವರ್ಯರಿಗೆ(ಸ) ಇಪ್ಪತ್ತೈದು ವರ್ಷ ವಯಸ್ಸಾಗಿತ್ತು. ಅವರ

ಕುಟುಂಬ ಜೀವನ ತುಂಬಾ ಆನಂದಮಯವಾಗಿತ್ತು. ಪ್ರವಾದಿವರ್ಯರಿಗೆ(ಸ) ಖದೀಜಾರಲ್ಲಿ ಆರು ಮಕ್ಕಳು ಜನಿಸಿದರು - ಕಾಸಿಮ್, ಅಬ್ದುಲ್ಲಾ, ಝೈನಬ್, ರುಕಿಯ್ಯಾ, ಉಮ್ಮುಕುಲ್ಸೂಮ್, ಫಾತಿಮಾ. ಪ್ರವಾದಿವರ್ಯರಿಗೆ(ಸ) 'ನುಬುವ್ವತ್' (ಪ್ರವಾದಿತ್ವ) ದೊರೆತಾಗ ಪ್ರಥಮವಾಗಿ ಖದೀಜಾರು ಅವರಲ್ಲಿ ವಿಶ್ವಾಸವಿರಿಸಿದರು. ಅವರು ತಮ್ಮ ಪ್ರಭಾವ ಮತ್ತು ಸಂಪತ್ತಿನಿಂದ ಪ್ರವಾದಿವರ್ಯರನ್ನು(ಸ) ಬೆಂಬಲಿಸಿದರು. ಪ್ರವಾದಿವರ್ಯರಿಗೆ(ಸ) ಖದೀಜಾರ ಮೇಲೆ ಅಪಾರ ಪ್ರೀತಿಯಿತ್ತು. ಅವರು ನಿಧನರಾಗುವ ತನಕ ಪ್ರವಾದಿವರ್ಯರು(ಸ) ಬೇರೆ ವಿವಾಹವಾಗಲಿಲ್ಲ.

♦♦*♦*♦

6 ವಿವಾದ ಮತ್ತು ಪರಿಹಾರ

ಪ್ರವಾದಿ ಇಬ್‌ರಾಹೀಮರ(ಅ) ಕುರಿತು ನಿಮಗೆ ತಿಳಿದಿದೆಯಷ್ಟೆ. ಅವರು ಮತ್ತು ಅವರ ಪುತ್ರ ಇಸ್ಮಾಈಲ್(ಅ) ಸೇರಿ ಮಕ್ಕಾದ ಕಅಬಾ ಭವನವನ್ನು ನಿರ್ಮಿಸಿದ್ದರು. ಅರಬರೆಲ್ಲರೂ ಕಅಬಾವನ್ನು ಬಹಳ ಗೌರವಿಸುತ್ತಿದ್ದರು. ಅವರು ಕಅಬಾದ 'ತವಾಫ್'(ಪ್ರದಕ್ಷಿಣೆ) ನಡೆಸುತ್ತಿದ್ದರು. ಕಅಬಾದ ಒಂದು ಮೂಲೆಯಲ್ಲಿ ಪ್ರವಾದಿ ಇಬ್‌ರಾಹೀಮ್(ಅ) ಇರಿಸಿದ 'ಹಜರುಲ್ ಅಸ್ವದ್' ಎಂಬ ಶಿಲೆಯಿದೆ. ಅರಬರು ಪ್ರಾಚೀನ ಕಾಲದಿಂದಲೇ ಅದಕ್ಕೆ ವಂದಿಸುತ್ತಿದ್ದರು.

ಒಮ್ಮೆ ಮಕ್ಕಾದಲ್ಲಿ ಭಾರೀ ಮಳೆ ಸುರಿದು ನೆರೆ ಬಂತು. ಕಅಬಾದ ಗೋಡೆಗಳು ಕುಸಿದು ಬಿದ್ದುವು. ಕಅಬಾದ ಮೇಲ್ವಿಚಾರಕರಾಗಿದ್ದ ಖುರೈಶರು, ಅದನ್ನು ಪುನಃ ನಿರ್ಮಿಸಲು ನಿರ್ಧರಿಸಿದರು. ಅದಕ್ಕಾಗಿ ಖುರೈಶಿ ಗಣ್ಯರೂ ಕಲ್ಲು ಮಣ್ಣುಗಳನ್ನು ಹೊತ್ತರು. ಪ್ರವಾದಿ(ಸ) ಮತ್ತು ಅವರ ಚಿಕ್ಕಪ್ಪ ಅಬ್ಬಾಸ್ ನಿರ್ಮಾಣ ಕೆಲಸದಲ್ಲಿ ಭಾಗಿಯಾದರು. ಆಗ ಪ್ರವಾದಿವರ್ಯರಿಗೆ(ಸ) 35 ವರ್ಷವಾಗಿತ್ತು.

ಕಅಬಾದ ಕೆಲಸ ಮುಂದುವರಿಯುತ್ತಿರುವಾಗ, 'ಹಜರುಲ್ ಅಸ್ವದ'ನ್ನು ಯಥಾಸ್ಥಾನದಲ್ಲಿ ಇರಿಸುವ ಸಂದರ್ಭ ಬಂತು. ಕಲ್ಲನ್ನು ಯಾರು ಎತ್ತಿ ಇರಿಸಬೇಕೆಂಬ ಬಗ್ಗೆ ವಿವಾದ ಉಂಟಾಯಿತು. 'ಹಜರುಲ್ ಅಸ್ವದ್'ನ್ನು ಇರಿಸಿದ ಗೌರವ ತಮಗೆ ಸಲ್ಲಬೇಕೆಂದು ಪ್ರತಿಯೊಂದು ಮನೆತನದವರೂ ಹಠಹಿಡಿದರು. ವಿವಾದವು ಮಿತಿಮೀರಿ, ಯುದ್ಧದ ಅಂಚಿಗೆ ತಲಪಿತು. ಆಗ ಓರ್ವ ಹಿರಿಯರು ಹೀಗೆಂದರು:

"ಇನ್ನು, ಪ್ರಥಮವಾಗಿ ಕಅಬಾದ ಅಂಗಣಕ್ಕೆ ಬರುವ ವ್ಯಕ್ತಿಯ ತೀರ್ಮಾನವನ್ನು ನಾವು ಅಂಗೀಕರಿಸೋಣ." ಎಲ್ಲರೂ ಅದಕ್ಕೆ ಒಪ್ಪಿದರು.

ಹೀಗಿರಲು ಪ್ರವಾದಿವರ್ಯರು(ಸ) ಅಲ್ಲಿಗೆ ಮೊದಲು ಬಂದರು. ಮೇಧಾವಿ,

ಸದ್ಗುಣವಂತ ಮತ್ತು ಜನಪ್ರಿಯರಾಗಿದ್ದ ಪ್ರವಾದಿವರ್ಯರ(ಸ) ತೀರ್ಮಾನ ನ್ಯಾಯೋಚಿತವಾಗಿರಬಹುದೆಂದು ಎಲ್ಲರಿಗೂ ಸಂತೋಷವಾಯಿತು. ಪ್ರವಾದಿ ವರ್ಯರು(ಸ) ಒಂದು ಬಟ್ಟೆಯನ್ನು ನೆಲದಲ್ಲಿ ಹಾಸಿದರು. 'ಹಜರುಲ್ ಅಸ್ವದ'ನ್ನು ಅದರ ಮೇಲಿರಿಸಿದರು. ಪ್ರತಿಯೊಂದು ಮನೆತನದ ಹಿರಿಯರೊಡನೆ ಬಟ್ಟೆಯ ಬದಿಯನ್ನು ಹಿಡಿದು ಕಲ್ಲನ್ನು ಮೇಲೆತ್ತುವಂತೆ ತಿಳಿಸಿದರು. ಕೊನೆಗೆ, ಪ್ರವಾದಿವರ್ಯರು(ಸ) ಸ್ವತಃ ಹಾಸಿನಿಂದ ಕಲ್ಲನ್ನು ಎತ್ತಿ ಯಥಾಸ್ಥಾನದಲ್ಲಿ ಇರಿಸಿದರು. ಹೀಗೆ ಒಂದು ದೊಡ್ಡ ಕಲಹ ನಿವಾರಣೆಯಾಯಿತು. ಎಲ್ಲರಿಗೂ ಸಂತೋಷವಾಯಿತು. ಇದರಿಂದ ಪ್ರವಾದಿವರ್ಯರ(ಸ) ಬುದ್ಧಿವಂತಿಕೆ ಮತ್ತು ಜನರಿಗೆ ಪ್ರವಾದಿವರ್ಯರ(ಸ) ಮೇಲಿದ್ದ ಭರವಸೆಯನ್ನು ನಾವು ತಿಳಿಯಬಹುದು.

♦♦*♦*♦

7 'ನುಬುವ್ವತ್'(ಪ್ರವಾದಿತ್ವ)

ಸುತ್ತಲಿನ ದುಷ್ಟ ಆಚಾರಗಳನ್ನು ನೋಡಿ ಪ್ರವಾದಿವರ್ಯರಿಗೆ(ಸ) ತುಂಬಾ ಖೇದವುಂಟಾಯಿತು. ಜನರು ಕಲ್ಲು ಮತ್ತು ಮರಗಳನ್ನು ಆರಾಧಿಸುತ್ತಿದ್ದರು. ಸೂರ್ಯ, ಚಂದ್ರ, ನಕ್ಷತ್ರಗಳನ್ನು ದೇವರಾಗಿ ಮಾಡಿದರು. ಶರಾಬು ಕುಡಿಯುತ್ತಿದ್ದರು. ಪರಸ್ಪರ ಕಚ್ಚಾಡುತ್ತಿದ್ದರು. ಬಡವರನ್ನು ದ್ವೇಷಿಸುತ್ತಿದ್ದರು. ಪ್ರವಾದಿವರ್ಯರು(ಸ) ಈ ಎಲ್ಲ ದುಷ್ಟ ಕಾರ್ಯಗಳಿಂದ ದೂರ ನಿಂತರು. ಉತ್ತಮ ರೀತಿಯಲ್ಲಿ ಬಾಳಿದರು. ಸಮೀಪದಲ್ಲಿದ್ದ 'ಹಿರಾ' ಎಂಬ ಬೆಟ್ಟದ ಗುಹೆಯಲ್ಲಿ ಒಂಟಿಯಾಗಿ ಕುಳಿತು ದೇವನನ್ನು ಸ್ಮರಿಸುತ್ತಿದ್ದರು. ಕೆಲವೊಮ್ಮೆ ಹಲವು ದಿನಗಳ ತನಕ ಅಲ್ಲಿಯೇ ತಂಗುತ್ತಿದ್ದರು. ಆಗ ಖದೀಜಾ(ರ) ಅಲ್ಲಿಗೆ ಆಹಾರ ವಸ್ತುಗಳನ್ನು ತಲಪಿಸುತ್ತಿದ್ದರು.

ಹೀಗೆ ಹಿರಾ ಗುಹೆಯಲ್ಲಿದ್ದಾಗ ಒಮ್ಮೆ ಜಿಬ್‌ರೀಲ್ ಎಂಬ ದೇವಚರ ಅವರ ಮುಂದೆ ಪ್ರತ್ಯಕ್ಷವಾದರು. ಪ್ರವಾದಿವರ್ಯರು(ಸ) ಹೆದರಿದರು. ಜಿಬ್‌ರೀಲ್(ಅ) ಪ್ರವಾದಿವರ್ಯರೊಡನೆ, 'ಓದಿರಿ' ಎಂದು ಹೇಳಿದರು. ಓದು ಬರಹ ತಿಳಿಯದ ಪ್ರವಾದಿವರ್ಯರು(ಸ) ಹೇಳಿದರು: "ನನಗೆ ಓದು ಬಾರದು." ಪುನಃ ಜಿಬ್‌ರೀಲ್‌ರು ಪ್ರವಾದಿವರ್ಯರನ್ನು(ಸ) ಅಪ್ಪಿ ಹಿಡಿದು, ಓದುವಂತೆ ಹೇಳಿದರು. ಪ್ರವಾದಿ ವರ್ಯರು(ಸ) ಮೊದಲಿನ ಉತ್ತರವನ್ನೇ ಹೇಳಿದರು. ಕೊನೆಗೆ 'ಅಲಕ್' ಎಂಬ ಅಧ್ಯಾಯದ 'ಇಕ್ರಅ್ ಬಿಸ್ಮಿ ರಬ್ಬಿಕ' ಎಂದು ಆರಂಭವಾಗುವ ಅಧ್ಯಾಯದ ಮೊದಲ ಭಾಗವನ್ನು ಜಿಬ್‌ರೀಲ್(ಅ) ಓದಿ ಹೇಳಿದರು. ಪ್ರವಾದಿವರ್ಯರು(ಸ) ಅದನ್ನು ಉಚ್ಚರಿಸಿದರು. ಇದು ಪ್ರವಾದಿವರ್ಯರಿಗೆ(ಸ) ಬಂದ ಮೊದಲ ದಿವ್ಯವಾಣಿಯಾಗಿತ್ತು. ಹೀಗೆ ಮುಹಮ್ಮದ್‌ರಿಗೆ(ಸ) 'ನುಬುವ್ವತ್' (ಪ್ರವಾದಿತ್ವ) ದೊರೆಯಿತು. ಆಗ ಪ್ರವಾದಿವರ್ಯರಿಗೆ(ಸ) ನಲ್ವತ್ತು ವರ್ಷ ವಯಸ್ಸಾಗಿತ್ತು. ಈ ಘಟನೆ ಕ್ರಿಸ್ತಶಕ 610ರ ರಮಝಾನ್ ತಿಂಗಳಲ್ಲಿ ನಡೆದಿತ್ತು.

ಜಿಬ್‌ರೀಲ್(ಅ) ಕಣ್ಮರೆಯಾದ ಬಳಿಕ ಪ್ರವಾದಿವರ್ಯರು(ಸ) ಹಿರಾ ಗುಹೆಯಿಂದ ಮನೆಗೆ ಮರಳಿದರು. ಭಯಭೀತರಾಗಿದ್ದ ಪ್ರವಾದಿವರ್ಯರು(ಸ) ತನಗೆ ಕಂಬಳಿ ಹೊದಿಸುವಂತೆ ಖದೀಜಾರಿಗೆ(ರ) ತಿಳಿಸಿದರು. ಪ್ರವಾದಿವರ್ಯರು(ಸ) ನಡುಗುತ್ತಿದ್ದರು. ಸ್ವಲ್ಪ ಶಾಂತರಾದ ಬಳಿಕ ಖದೀಜಾರಿಗೆ(ರ) ಹಿರಾ ಗುಹೆಯಲ್ಲಿ ನಡೆದ ವೃತ್ತಾಂತವನ್ನು ತಿಳಿಸಿದರು. ಅವರು ಪ್ರವಾದಿವರ್ಯರನ್ನು(ಸ) ಕರೆದುಕೊಂಡು ವರಕ ಬಿನ್ ನೌಫಲ್ ಎಂಬೋರ್ವ ಸಂಬಂಧಿಕನ ಬಳಿಗೆ ಹೋದರು. ಅವರು ವೇದ ಪಾರಂಗತರಾಗಿದ್ದರು. ಎಲ್ಲಾ ವಿವರಗಳನ್ನು ವಿಚಾರಿಸಿ ತಿಳಿದುಕೊಂಡ ಬಳಿಕ, ಪ್ರವಾದಿವರ್ಯರ(ಸ) ಬಳಿ ಬಂದವರು ಪ್ರವಾದಿ ಮೂಸಾ ಮತ್ತು ಈಸಾರ ಬಳಿಗೆ ಬಂದಿದ್ದ ಜಿಬ್‌ರೀಲ್ ಎಂಬ ದೇವಚರರೆಂದು ಖಚಿತವಾಯಿತು. ಪ್ರವಾದಿವರ್ಯರಿಗೆ(ಸ) ಎಲ್ಲಾ ರೀತಿಯ ಬೆಂಬಲದ ವಾಗ್ದಾನ ನೀಡಿದರು. ಆದರೆ, ಕೆಲವೇ ದಿನಗಳಲ್ಲಿ ವರಕ ಬಿನ್ ನೌಫಲ್ ನಿಧನರಾದರು.

♦♦*♦*♦

8 ಧರ್ಮ ಪ್ರಚಾರ

ಪ್ರವಾದಿವರ್ಯರಿಗೆ(ಸ) ಜಿಬ್‌ರೀಲ್‌ರ(ಅ) ಮೂಲಕ ಅಲ್ಲಾಹನ ಆದೇಶಗಳು ಲಭಿಸುತ್ತಿದ್ದುವು. ಜನರಿಗೆ ಆ ಆದೇಶಗಳನ್ನು ತಿಳಿಸಿ, ಅವರನ್ನು ಇಸ್ಲಾಮಿಗೆ ಆಹ್ವಾನಿಸುವಂತೆ ಅಲ್ಲಾಹನು ಪ್ರವಾದಿವರ್ಯರಿಗೆ(ಸ) ತಿಳಿಸಿದನು. ಆದರೆ, ಜನರೆಲ್ಲರೂ ಕಲ್ಲು, ಮರ, ಸೂರ್ಯ, ಚಂದ್ರ, ನಕ್ಷತ್ರಾದಿಗಳನ್ನು ಪೂಜಿಸುವವರಾಗಿದ್ದರು. ಆದ್ದರಿಂದ, ಪ್ರವಾದಿವರ್ಯರು(ಸ) ಮೊದಲು ತಮ್ಮ ಆಪ್ತ ಮಿತ್ರರನ್ನು ಮತ್ತು ಕುಟುಂಬದವರನ್ನು ಇಸ್ಲಾಮಿಗೆ ಆಹ್ವಾನಿಸಿದರು. ಪ್ರಥಮವಾಗಿ ಹ. ಖದೀಜಾ(ರ) ಪ್ರವಾದಿವರ್ಯರಲ್ಲಿ(ಸ) ವಿಶ್ವಾಸವಿರಿಸಿದರು. ಅನಂತರ ಅಬೂತಾಲಿಬ್‌ರ ಪುತ್ರ ಅಲೀ(ರ) ವಿಶ್ವಾಸವಿರಿಸಿದರು. ಅಂದು ಅವರು ಕೇವಲ 12 ವಯಸ್ಸಿನವರಾಗಿದ್ದರು. ಆಮಿನಾರ ನಿಧನದ ಬಳಿಕ ಪ್ರವಾದಿವರ್ಯರನ್ನು(ಸ) ಪೋಷಿಸಿದ ಉಮ್ಮು ಐಮನ್ ಮತ್ತು ಪ್ರವಾದಿವರ್ಯರ(ಸ) ಸಾಕುಪುತ್ರ ಝೈದ್ ಬಿನ್ ಹಾರಿಸ್ ಕೂಡಾ ಆರಂಭ ಕಾಲದಲ್ಲಿಯೇ ಇಸ್ಲಾಮ್ ಸ್ವೀಕರಿಸಿದ್ದರು. ಅಲ್ಲದೇ, ವ್ಯಾಪಾರಿ, ನ್ಯಾಯನಿಷ್ಠ ಮತ್ತು ಕುರೈಶಿ ಗಣ್ಯರಲ್ಲೋರ್ವರಾಗಿದ್ದ ಅಬೂಬಕರ್ ಸಿದ್ದೀಕ್‌ರೂ ಪ್ರವಾದಿವರ್ಯರಲ್ಲಿ(ಸ) ವಿಶ್ವಾಸವಿರಿಸಿದರು. ಅವರು ಮೊದಲೇ ಪ್ರವಾದಿವರ್ಯರ(ಸ) ಆಪ್ತ ಗೆಳೆಯರಾಗಿದ್ದರು.

ಆದರೆ, ಅಲ್ಲಾಹನು ಎಲ್ಲ ಜನರಿಗಾಗಿ ನೀಡಿದ ಧರ್ಮವನ್ನು ಗುಪ್ತವಾಗಿರಿಸಲು ಸಾಧ್ಯವಿಲ್ಲವಷ್ಟೇ. ಆದ್ದರಿಂದ, ಪ್ರವಾದಿವರ್ಯರು(ಸ) ಕ್ರಮೇಣ ಬಹಿರಂಗವಾಗಿ ಜನರನ್ನು ಇಸ್ಲಾಮಿಗೆ ಆಹ್ವಾನಿಸಲಾರಂಭಿಸಿದರು. ಮೊದಲು ತಮ್ಮ ಗೋತ್ರದವರನ್ನು ಆಹ್ವಾನಿಸಿದರು.

ಒಂದು ದಿನ ಪ್ರವಾದಿವರ್ಯರು(ಸ) ಒಂದು ಬೆಟ್ಟದ ಮೇಲೇರಿ ನಿಂತು ತಮ್ಮ ಕುಟುಂಬದವರೆಲ್ಲರನ್ನು ಕೂಗಿ ಕರೆದರು. ಪ್ರವಾದಿವರ್ಯರು(ಸ) ಅಲ್ಲಿ ಬಂದು ಸೇರಿದ ಜನರೊಡನೆ ಹೀಗೆ ಪ್ರಶ್ನಿಸಿದರು: "ಈ ಬೆಟ್ಟದ ಹಿಂಬದಿಯಲ್ಲಿ ಒಂದು

ಸೇನೆಯು ನಿಮ್ಮನ್ನು ಆಕ್ರಮಿಸಲು ಸಜ್ಜಾಗಿದೆಯೆಂದು ನಾನು ಹೇಳಿದರೆ ನೀವು ನನ್ನ ಮಾತನ್ನು ನಂಬುವಿರಾ?" ಆಗ ಅವರೆಲ್ಲರೂ, "ಖಂಡಿತವಾಗಿಯೂ ನಾವು ನಂಬುತ್ತೇವೆ. ಏಕೆಂದರೆ, ನೀನು ಸತ್ಯವಂತನಾಗಿರುವೆ" ಎಂದು ಉತ್ತರಿಸಿದರು. ಆಗ ಪ್ರವಾದಿವರ್ಯರು(ಸ) ಹೇಳಿದರು: "ಹಾಗಾದರೆ ಅಲ್ಲಾಹನು ಏಕನು. ನಾನು ಆತನ ಪ್ರವಾದಿಯಾಗಿದ್ದೇನೆ. ನೀವು ಅಲ್ಲಾಹನ ವಿನಾ ಯಾರನ್ನೂ ಆರಾಧಿಸಬಾರದು. ಉಪಕಾರ ಅಥವಾ ಉಪದ್ರವ ಮಾಡಲು ಅವುಗಳಿಂದ ಸಾಧ್ಯವಿಲ್ಲ." ಈ ಮಾತನ್ನು ಕೇಳಿ ಜನರಿಗೆ ಕೋಪ ಬಂತು. ಪ್ರವಾದಿವರ್ಯರ(ಸ) ಚಿಕ್ಕಪ್ಪ ಅಬೂಲಹಬ್ ಹೀಗೆಂದರು: "ನಾಶವಾಗು! ನೀನು ನಮ್ಮನ್ನು ಇದಕ್ಕಾಗಿ ಕರೆದೆಯಾ?"

ಅದಕ್ಕೆ ಉತ್ತರವಾಗಿ ಕುರ್‌ಆನಿನ "ತಬ್ಬತ್ ಯದಾ ಅಬೀಲಹಬಿನ್ ವತಬ್ಬ" ಎಂಬ ಅಧ್ಯಾಯ ಅವತೀರ್ಣಗೊಂಡಿತು. ಅಬೂಲಹಬ್ ಮತ್ತು ಆತನ ಪತ್ನಿ ಉಮ್ಮು ಜಮೀಲ್ ಪ್ರವಾದಿವರ್ಯರ(ಸ) ಕಡು ವೈರಿಗಳಾಗಿದ್ದರು.

♦♦*♦*♦

9

ಹಮ್‌ಝಾ(ರ)

ಪ್ರವಾದಿವರ್ಯರು(ಸ) ಜನರನ್ನು ಇಸ್ಲಾಮ್ ಧರ್ಮಕ್ಕೆ ಬಹಿರಂಗವಾಗಿ ಕರೆಯಲಾರಂಭಿಸಿದರೆಂದು ಈಗಾಗಲೇ ಹೇಳಿದೆ. ಮೂರ್ತಿಗಳನ್ನು ಆರಾಧಿಸಬಾರದು. ಕೊಲೆ ಮತ್ತು ಕೊಳ್ಳೆ ನಡೆಸಬಾರದು. ತಂದೆ ತಾಯಿಯರನ್ನು ಗೌರವಿಸಬೇಕು. ಬಡವರಿಗೆ ನೆರವಾಗಬೇಕು. ಬಡ್ಡಿ ತಿನ್ನಬಾರದು. ಮೋಸ, ವಂಚನೆ ಮಾಡಬಾರದು. ಅಲ್ಲಾಹನ ದೃಷ್ಟಿಯಲ್ಲಿ ಶ್ರೀಮಂತರೂ ಬಡವರೂ ಸಮಾನರು. ಅತ್ಯಧಿಕ ಭಯಭಕ್ತಿಯಿಂದ ಬಾಳುವವರೇ ಅಲ್ಲಾಹನಿಗೆ ಅತ್ಯಂತ ಪ್ರಿಯರು. ಇಂತಹ ಇಸ್ಲಾಮಿ ವಿಚಾರಗಳು ಮುಶ್ರಿಕ(ಬಹುದೇವಾರಾಧಕ)ರಿಗೆ ರುಚಿಸಲಿಲ್ಲ. ಜನರು ನೆರೆದಿರುವ ಸ್ಥಳಗಳಿಗೆ ಹೋಗಿ ಪ್ರವಾದಿವರ್ಯರು(ಸ) ಈ ವಿಷಯಗಳನ್ನು ಬೋಧಿಸುತ್ತಿದ್ದರು. ಇದರಿಂದ ಜನರ ವಿರೋಧವೂ ಹೆಚ್ಚಿತು. ಚಿಕ್ಕಪ್ಪ ಅಬೂತಾಲಿಬ್ ಮಾತ್ರ ಪ್ರವಾದಿವರ್ಯರಿಗೆ(ಸ) ನೆರವಾಗುತ್ತಿದ್ದರು.

ಒಮ್ಮೆ ಪ್ರವಾದಿವರ್ಯರು(ಸ) ಕಅಬಾದಲ್ಲಿ ನಮಾಝ್ ಮಾಡುತ್ತಿದ್ದಾಗ ವೈರಿಗಳು ಸತ್ತ ಒಂಟೆಯ ಕರುಳನ್ನು ತಂದು ಅವರ ಕೊರಳಿಗೆ ಹಾಕಿದರು. ಪ್ರವಾದಿವರ್ಯರು(ಸ) ತಲೆಯೆತ್ತಲಾಗದೆ ಸುಜೂದ್(ಸಾಷ್ಟಾಂಗ)ನಲ್ಲಿಯೇ ಉಳಿದರು. ಕೊನೆಗೆ ಪುತ್ರಿ ಫಾತಿಮಾ(ರ) ಆ ಕರುಳನ್ನು ಕೊರಳಿನಿಂದ ಸರಿಸಿದರು.

ಇನ್ನೊಮ್ಮೆ ಅಬೂಜಹಲ್ ಪ್ರವಾದಿವರ್ಯರನ್ನು(ಸ) ಅವಾಚ್ಯವಾಗಿ ಬಯ್ದನು. ಪ್ರವಾದಿವರ್ಯರು(ಸ) ಚಕಾರವೆತ್ತದೆ ಎಲ್ಲವನ್ನೂ ಸಹನೆಯಿಂದ ಆಲಿಸಿದರು. ಮೂರ್ಖರ ನಿಂದನೆಗಳಿಗೆ ಉತ್ತರ ಹೇಳುವುದು ವಿವೇಕಿಗಳಿಗೆ ಭೂಷಣವಲ್ಲ. ಆದರೆ ಪ್ರವಾದಿವರ್ಯರನ್ನು(ಸ) ಅಬೂಜಹಲ್ ಬಯ್ದು ಹಂಗಿಸಿದ ಸುದ್ದಿಯು ಪ್ರವಾದಿವರ್ಯರ(ಸ) ಚಿಕ್ಕಪ್ಪ ಹಮ್‌ಝಾರಿಗೆ ತಿಳಿಯಿತು. ಅವರೋರ್ವ ಧೀರ, ಶೂರ ಯುವಕರಾಗಿದ್ದರು. ತಮ್ಮ ಸಹೋದರನ ಪುತ್ರನನ್ನು ಈ ರೀತಿ ಬಯ್ದದ್ದು

ಅವರಿಗೆ ಸಹಿಸಲಾಗಲಿಲ್ಲ. ಅವರು ನೇರವಾಗಿ ಅಬೂಜಹಲ್‌ನ ಬಳಿಗೆ ಹೋದರು. ಅಬೂಜಹಲ್ ಕುರೈಶಿ ಗಣ್ಯರ ಜತೆ ಕುಳಿತಿದ್ದನು. ಹಮ್‌ಝಾ ಅಬೂಜಹಲ್‌ರನ್ನು ಚೆನ್ನಾಗಿ ತೆಗಳಿ ತಮ್ಮ ಕೈಯಲ್ಲಿದ್ದ ಬಿಲ್ಲಿನಿಂದ ಹೊಡೆದರು. ಹಮ್‌ಝಾ ಇಸ್ಲಾಮ್ ಸ್ವೀಕರಿಸಿದ್ದಾರೆಯೇ ಎಂದು ಹಲವರಿಗೆ ಸಂಶಯವಾಯಿತು. ಹಮ್‌ಝಾ ಅವರೊಡನೆ ಹೇಳಿದರು: "ಮುಹಮ್ಮದ್ ಹೇಳುತ್ತಿರುವ ಮಾತು ಸತ್ಯ. ನೀವೆಲ್ಲರೂ ಹಾದಿ ತಪ್ಪಿರುವಿರೆಂದು ನನಗೆ ಮನವರಿಕೆಯಾಗಿದೆ. ಇಂದಿನಿಂದ ನಾನು ಮುಹಮ್ಮದ್‌ರಲ್ಲಿ(ಸ) ವಿಶ್ವಾಸವಿರಿಸುತ್ತೇನೆ. ಯಾರಿಗಾದರೂ ನನ್ನನ್ನು ಅದರಿಂದ ತಡೆಯುವ ಸಾಮರ್ಥ್ಯವಿದ್ದರೆ ಮುಂದೆ ಬರಲಿ. ನಾನು ಅವರಿಗೆ ಬುದ್ಧಿ ಕಲಿಸುತ್ತೇನೆ."

ಹಮ್‌ಝಾರನ್ನು(ರ) ಎದುರಿಸುವ ಧೈರ್ಯ ಯಾರಿಗೂ ಇರಲಿಲ್ಲ. ಅವರು ಇಸ್ಲಾಮ್ ಧರ್ಮಕ್ಕೆ ಸೇರಿದ್ದರಿಂದ ಮುಸ್ಲಿಮರಿಗೆ ಇನ್ನಷ್ಟು ಧೈರ್ಯ ಮತ್ತು ಸಮಾಧಾನವಾಯಿತು. ಅವರು ಬಹಳ ಸಂತುಷ್ಟರಾದರು.

♦♦*♦*♦

10 ಕುರೈಶರ ಭೇಟಿ

ಮಕ್ಕಾ ಮುಶ್ರಿಕರ ಪೀಡನೆ ಮುಂದುವರಿದಿತ್ತು. ಹಾಗಿದ್ದರೂ ಪ್ರವಾದಿ(ಸ) ಮತ್ತು ಅವರ ಅನುಯಾಯಿಗಳು ಇಸ್ಲಾಮಿನ ಸಂದೇಶವನ್ನು ಪ್ರಚಾರ ಮಾಡುತ್ತಿದ್ದರು. ಅನೇಕ ಹೊಸಬರು ಇಸ್ಲಾಮಿಗೆ ಸೇರಿದರು. ಇಸ್ಲಾಮಿನ ಪ್ರಾಬಲ್ಯವು ಅಪಾಯಕಾರಿಯೆಂದು ಮನಗಂಡ ಹಲವು ಕುರೈಶಿ ಗಣ್ಯರು ಪ್ರವಾದಿವರ್ಯರ(ಸ) ಬಳಿ ಬಂದು ಧರ್ಮ ಪ್ರಚಾರವನ್ನು ನಿಲ್ಲಿಸುವಂತೆ ಒತ್ತಾಯಿಸಿದರು. ಅದರ ಬದಲಿಗೆ ಏನು ಬೇಕಾದರೂ ನೀಡಲು ಸಿದ್ಧರಿದ್ದೇವೆ. ನಿಮಗೆ ಹಣ ಬೇಕಿದ್ದರೆ, ನಿಮ್ಮನ್ನು ಅತಿದೊಡ್ಡ ಶ್ರೀಮಂತನಾಗಿ ಮಾಡುತ್ತೇವೆ. ಅಧಿಕಾರ ಬೇಕಿದ್ದರೆ, ನಿಮ್ಮನ್ನೇ ರಾಜನಾಗಿ ಮಾಡುತ್ತೇವೆ ಎಂಬಿತ್ಯಾದಿ ಆಮಿಷಗಳನ್ನು ಒಡ್ಡಿದರು. ಆದರೆ, ಪ್ರವಾದಿವರ್ಯರು(ಸ) ಆಗ ಕುರ್‌ಆನ್ ವಾಕ್ಯಗಳನ್ನು ಓದಿ ಹೇಳಿ ಅವರನ್ನೂ ಇಸ್ಲಾಮ್ ಧರ್ಮಕ್ಕೆ ಆಹ್ವಾನಿಸಿದರು.

ಕುರೈಶಿ ಗಣ್ಯರು ತಮ್ಮ ತಂತ್ರ ಫಲಿಸದೆಂದು ಮನಗಂಡು ಕೊನೆಗೆ ಅಬೂತಾಲಿಬ್‌ರನ್ನು ಭೇಟಿಯಾಗಲು ನಿರ್ಧರಿಸಿದರು. ಅಬೂತಾಲಿಬ್ ಮಾತ್ರ ಪ್ರವಾದಿವರ್ಯರಿಗೆ(ಸ) ಆಸರೆಯಾಗಿದ್ದರು. ಕುರೈಶರು ಹಿರಿಯರಾದ ಅಬೂತಾಲಿಬ್‌ರಿಗೆ ಹೆದರಿ ಪ್ರವಾದಿವರ್ಯರನ್ನು(ಸ) ಕೊಲ್ಲಲು ಹಿಂಜರಿಯುತ್ತಿದ್ದರು. ಒಮ್ಮೆ ಅವರು ಅಬೂತಾಲಿಬ್‌ರೊಂದಿಗೆ ಹೀಗೆ ದೂರು ನೀಡಿದ್ದರು, "ಅಬೂತಾಲಿಬ್‌ರೇ! ನೀವು ನಮ್ಮ ಹಿರಿಯರು ಮತ್ತು ನಾಯಕರಾಗಿದ್ದೀರಿ. ನಿಮ್ಮ ಸಹೋದರ ಪುತ್ರನು ನಮ್ಮ ದೇವಂದಿರನ್ನು ತಿರಸ್ಕರಿಸಿರುವುದು ಮತ್ತು ನಮ್ಮ ಧರ್ಮದಂತೆ ನಡೆಯದಿರುವುದು ನಿಮಗೆ ತಿಳಿದಿದೆ. ಇನ್ನು ಮುಂದೆ ಆತನನ್ನು ನಾವು ಸಹಿಸಲಾರೆವು. ನೀವು ಆತನನ್ನು ಈಗಲೇ ತಡೆಯಬೇಕು." ಅಬೂತಾಲಿಬ್‌ರು ಅವರನ್ನು ಸೂಕ್ತ ಮಾತುಗಳಿಂದ ಸಮಾಧಾನ ಪಡಿಸಿದರು. ತರುವಾಯ ಪ್ರವಾದಿ ಮುಹಮ್ಮದ್‌ರು(ಸ) ಮನೆಗೆ

ಬಂದಾಗ ನಡೆದ ಎಲ್ಲ ವಿಷಯವನ್ನು ಅವರಿಗೆ ತಿಳಿಸಿದರು. "ಈ ಇಳಿ ವಯಸ್ಸಿನಲ್ಲಿ ನನ್ನಿಂದ ಹೊರಲಾಗದ ಹೊರೆಯನ್ನು ನನ್ನ ಮೇಲೆ ಹೊರಿಸಬೇಡ" ಎಂದು ಬಹಳ ವಿಷಾದದಿಂದ ಹೇಳಿದರು. ತಮಗೆ ಆಸರೆಯಾಗಿದ್ದ ಚಿಕ್ಕಪ್ಪನೂ ತಮ್ಮ ಕೈ ಬಿಡುವರೇ ಎಂದು ಚಿಂತಿಸಿ ಪ್ರವಾದಿವರ್ಯರಿಗೆ(ಸ) ತೀವ್ರ ಕಳವಳವುಂಟಾಯಿತು. ಆದರೆ, ಅಲ್ಲಾಹನು ನೀಡಿರುವ ಹೊಣೆಗಾರಿಕೆಯನ್ನು ಯಾವ ಪರಿಸ್ಥಿತಿಯಲ್ಲಿಯೂ ತ್ಯೊರೆಯಬಾರದಷ್ಟೆ. ಆದುದರಿಂದ ಪ್ರವಾದಿವರ್ಯರು(ಸ) ಹೇಳಿದರು: "ಅಲ್ಲಾಹನಾಣೆ! ಅವರು ಸೂರ್ಯನನ್ನು ನನ್ನ ಬಲಗೈಯಲ್ಲಿ ಮತ್ತು ಚಂದ್ರನನ್ನು ಎಡಗೈಯಲ್ಲಿ ತಂದಿಟ್ಟರೂ ನಾನು ಈ ಕರ್ತವ್ಯವನ್ನು ತೊರೆಯುವ ಸಾಧ್ಯತೆಯಿಲ್ಲ. ಒಂದೋ ಈ ಧರ್ಮ ಜಯ ಗಳಿಸುವುದು ಅಥವಾ ನಾನು ಈ ಹಾದಿಯಲ್ಲಿ ಮರಣ ಹೊಂದುವೆನು."

ಪ್ರವಾದಿವರ್ಯರು(ಸ) ತಮ್ಮ ಚಟುವಟಿಕೆಗಳನ್ನು ಮುಂದುವರಿಸಿದರು. ಇಸ್ಲಾಮ್ ಪ್ರಬಲವಾಗುತ್ತಿರುವುದನ್ನು ನೋಡಿದ ಕುರೈಶಿ ಗಣ್ಯರು ಇನ್ನೊಮ್ಮೆ ಅಬೂತಾಲಿಬ್‌ರ ಬಳಿಗೆ ಹೋದರು. ಈ ಬಾರಿ ಉಮಾರತ್ ಬಿನ್ ವಲೀದ್ ಎಂಬೋರ್ವ ಸುಂದರ ಯುವಕನನ್ನೂ ಜತೆಗೆ ಕರೆದೊಯ್ದಿದ್ದರು. ಅಲ್ಲಿ ಹೀಗೆ ಹೇಳಿದರು: "ಅಬೂತಾಲಿಬ್‌ರೇ! ಕುರೈಶರಲ್ಲಿ ಅತಿಸಮರ್ಥ ಹಾಗೂ ಬುದ್ಧಿವಂತನಾದ ಈ ಯುವಕನನ್ನು ನಿಮಗೆ ನೀಡುತ್ತೇವೆ. ನೀವು ಈತನಿಗೆ ಪ್ರತಿಯಾಗಿ ಮುಹಮ್ಮದ್‌ರನ್ನು ಕೊಡಿರಿ." ಆಗ ಅಬೂತಾಲಿಬ್ ಕೋಪೋದ್ರಿಕ್ತರಾಗಿ, "ನೀವು ಏನು ಹೇಳುತ್ತಿರುವಿರಿ? ಬೇರೆಯವರ ಮಗನನ್ನು ನಾನು ಸಾಕಬೇಕೆ? ನೀವು ನನ್ನ ಮಗನನ್ನು ಕೊಲ್ಲುತ್ತೀರಾ? ಅದೆಂದೂ ನಡೆಯದು" ಎಂದು ಹೇಳಿದರು. ಕೊನೆಗೆ ಕುರೈಶರು ನಿರಾಶರಾಗಿ ಮರಳಿದರು.

♦♦*♦*♦

11 ಮರ್ದನಗಳು

ಇಸ್ಲಾಮನ್ನು ಹೇಗಾದರೂ ಅಳಿಸಿ ಬಿಡಬೇಕೆಂದು ವಿರೋಧಿಗಳು ಪಣ ತೊಟ್ಟರು. ಮೊದಮೊದಲು ಇಸ್ಲಾಮ್ ಸ್ವೀಕರಿಸಿದವರಲ್ಲಿ ಬಹುಮಂದಿ ಬಡವರಾಗಿದ್ದರು. ಅವರ ಸಂರಕ್ಷಣೆಗೆ ಯಾರೂ ಇರಲಿಲ್ಲ. ಕುರೈಶಿ ನಾಯಕರು ಅವರನ್ನು ಕಠಿಣವಾಗಿ ಹಿಂಸಿಸಿದರು. ಆ ಪೈಕಿ ಖಬ್ಬಾಬ್ ಬಿನ್ ಅರತ್ ಎಂಬ ಸಹಾಬಿಯೂ ಇದ್ದರು. ಅವರೋರ್ವ ಕಮ್ಮಾರರಾಗಿದ್ದರು. ಖಬ್ಬಾಬ್‌ರು ಉಮ್ಮು ಅನ್ಮಾರ್ ಎಂಬ ಮಹಿಳೆಯ ಗುಲಾಮರಾಗಿದ್ದರು. ಮುಸ್ಲಿಮರಾದುದಕ್ಕಾಗಿ ಅವರನ್ನು ತೀವ್ರವಾಗಿ ಮರ್ದಿಸಿದರು. ಕೈಕಾಲುಗಳನ್ನು ಕಟ್ಟಿ ಕಾದ ಕಬ್ಬಿಣದ ಸಲಾಕೆಯಿಂದ ಬೆನ್ನಿಗೆ ಬರೆ ಎಳೆದರು.

ಬಿಲಾಲ್‌ರು(ರ) ಉಮಯ್ಯ ಬಿನ್ ಖಲಫ್‌ರ ಗುಲಾಮರಾಗಿದ್ದರು. ಮುಸ್ಲಿಮನಾದುದಕ್ಕಾಗಿ ಬಿಸಿ ಮರಳಿನಲ್ಲಿ ಮಲಗಿಸಿ ಬೆನ್ನ ಮೇಲೆ ಕಲ್ಲಿರಿಸಿ ಹೊಡೆಯುತ್ತಿದ್ದರು. ಒಂದೋ ಸಾಯಬೇಕು ಇಲ್ಲದಿದ್ದರೆ ಇಸ್ಲಾಮಿನಿಂದ ಹಿಂದಿರುಗಿ ಬರಬೇಕೆಂದು ಒತ್ತಾಯಿಸುತ್ತಿದ್ದರು. ಆದರೆ ಹಿಂಸೆಯಿಂದ ಚಡಪಡಿಸುತ್ತಿದ್ದರೂ ಅವರು ಇಸ್ಲಾಮ್ ಧರ್ಮವನ್ನು ತೊರೆಯಲಿಲ್ಲ. 'ಅಲ್ಲಾಹನು ಏಕನು' ಎಂದು ಅವರು ನಿರಂತರ ಉದ್ಗರಿಸುತ್ತಿದ್ದರು. ಕೊನೆಗೆ ಅಬೂಬಕರ್‌ರು(ರ) ಅವರನ್ನು ಖರೀದಿಸಿ ಸ್ವತಂತ್ರಗೊಳಿಸಿದರು. ವಿರೋಧಿಗಳು ಅಮ್ಮಾರ್ ಬಿನ್ ಯಾಸಿರ್‌ರನ್ನೂ ಅವರ ತಂದೆ-ತಾಯಿಗಳನ್ನೂ ತೀವ್ರವಾಗಿ ಮರ್ದಿಸಿ ಪೀಡಿಸಿದರು. ಅವರನ್ನು ಸುಡು ಮರಳಿನಲ್ಲಿ ಮಲಗಿಸಿ ದರದರನೆ ಎಳೆಯುತ್ತಿದ್ದರು. ಕೆಲವೊಮ್ಮೆ ಪ್ರವಾದಿವರ್ಯರು(ಸ) ಈ ಹಿಂಸೆಯನ್ನು ಪ್ರತ್ಯಕ್ಷ ನೋಡಿದ್ದರೂ ಅವರಿಗೆ ಅದನ್ನು ತಡೆಯುವ ಸಾಮರ್ಥ್ಯವಿರಲಿಲ್ಲ. "ಯಾಸಿರ್ ಕುಟುಂಬವೇ ಸಹನೆ ವಹಿಸಿರಿ. ನಿಮಗೆ ಸ್ವರ್ಗವಿದೆ" ಎಂದು ಪ್ರವಾದಿವರ್ಯರು(ಸ) ಅವರನ್ನು ಸಾಂತ್ವನ ಪಡಿಸುತ್ತಿದ್ದರು. ಕಠೋರ

ಮರ್ದನಗಳಿಂದ ಅಮ್ಮಾರ್‌ರ ತಂದೆ ಯಾಸಿರ್ ಮತ್ತು ತಾಯಿ ಸುಮಯ್ಯರವರು ಮರಣ ಹೊಂದಿದರು.

ಅಬೂದರ್ ಗಿಫ್ಫಾರಿ ಎಂಬ ಸಹಾಬಿಯು ಪ್ರವಾದಿವರ್ಯರ(ಸ) ಭೇಟಿಗಾಗಿ ಮಕ್ಕಾಕ್ಕೆ ಬಂದರು. ಅಲೀಯವರ(ರ) ಜತೆ ಗುಪ್ತವಾಗಿ ಪ್ರವಾದಿವರ್ಯರನ್ನು(ಸ) ಭೇಟಿಯಾಗಿ ಮುಸ್ಲಿಮರಾದರು. ತರುವಾಯ, ಮಕ್ಕಾದ ಮುಶ್ರಿಕರ ಸಮ್ಮುಖದಲ್ಲಿಯೇ 'ಶಹಾದತ್ ಕಲಿಮ'ವನ್ನು ಗಟ್ಟಿಯಾಗಿ ಘೋಷಿಸಿ ಹೇಳಿದರು. ಇದನ್ನು ಕೇಳಿದ ಮುಶ್ರಿಕರೆಲ್ಲರೂ ಜತೆಗೂಡಿ ಅಬೂದರ್‌ರನ್ನು ಥಳಿಸಿದರು. ಕೊನೆಗೆ ಅವರನ್ನು ಅಬ್ಬಾಸ್(ರ) ರಕ್ಷಿಸಿದರು.

ಹೀಗೆ ಇಸ್ಲಾಮಿನ ಹೆಸರಲ್ಲಿ ತೀವ್ರ ಸಂಕಷ್ಟಗಳನ್ನು ಅನುಭವಿಸಿದ ಅನೇಕ ಸಹಾಬಿಗಳಿದ್ದಾರೆ. ಅವರು ಮರ್ದನಗಳಿಗೆ ಹೆದರಿ ಇಸ್ಲಾಮ್ ಧರ್ಮವನ್ನು ತೊರೆಯಲಿಲ್ಲ. ಸ್ವರ್ಗ ಪ್ರಾಪ್ತಿಯಾಗಬೇಕಾದರೆ ಎಲ್ಲವನ್ನೂ ಸಹಿಸಿ ಮುಸ್ಲಿಮನಾಗಿ ಬಾಳಲೇ ಬೇಕಾಗಿದೆ.

♦♦*♦*♦

12 ಅಬಿಸೀನಿಯಾಕ್ಕೆ ವಲಸೆ

ಮುಶ್ರಿಕರ ಹಿಂಸೆಯು ಮಿತಿಮೀರಿದಾಗ ಮುಸ್ಲಿಮರು ದೇಶದಿಂದ ಹೊರ ಹೋಗುವ ಕುರಿತು ಆಲೋಚಿಸಿದರು. ಅಬಿಸೀನಿಯಾ(ಇಥಿಯೋಪಿಯಾ)ಕ್ಕೆ ಹಿಜ್ರತ್ ಹೋಗುವಂತೆ ಪ್ರವಾದಿವರ್ಯರು(ಸ) ಅವರಿಗೆ ಉಪದೇಶಿಸಿದರು. ಅಲ್ಲಿನ ರಾಜ ನಜ್ಜಾಶಿ ತುಂಬಾ ನ್ಯಾಯಪ್ರಿಯನಾಗಿದ್ದನು. ಅವನ ಆಶ್ರಯದಲ್ಲಿ ನೆಮ್ಮದಿಯಿಂದ ಬಾಳಬಹುದೆಂದು ಪ್ರವಾದಿವರ್ಯರು(ಸ) ಸಮಾಧಾನ ಹೇಳಿದರು. ಹೀಗೆ ಕೆಲವರು ಮನೆಮಾರು ತೊರೆದು ಅಬಿಸೀನಿಯಾಕ್ಕೆ ಹೊರಟು ಹೋದರು. ಆ ತಂಡದಲ್ಲಿ ಉಸ್ಮಾನ್ ಬಿನ್ ಅಫ್ಫಾನ್ ಮತ್ತು ಅವರ ಪತ್ನಿಯೂ ಪ್ರವಾದಿ ಪುತ್ರಿಯೂ ಆಗಿದ್ದ ರುಕಿಯ್ಯಾ, ಜಅ್‌ಫರ್ ಬಿನ್ ಅಬೀತಾಲಿಬ್, ರಬೀ ಬಿನ್ ಅವ್ವಾಮ್, ಅಬ್ದುರ್ರಹ್ಮಾನ್ ಬಿನ್ ಔಫ್, ಮುಸ್‌ಅಬ್ ಬಿನ್ ಉಮೈರ್ ಮುಂತಾದವರಿದ್ದರು. ಕ್ರಮೇಣ ಅಬಿಸೀನಿಯಾಕ್ಕೆ ವಲಸೆ ಹೋದವರ ಸಂಖ್ಯೆ101ಕ್ಕೇರಿತು. ಅದರಲ್ಲಿ 83 ಪುರುಷರು ಮತ್ತು 18 ಮಂದಿ ಮಹಿಳೆಯರಿದ್ದರು.

ಮುಸ್ಲಿಮರು ಅಬಿಸೀನಿಯಾದಲ್ಲಿ ಸುಖವಾಗಿ ಬಾಳುತ್ತಿರುವರೆಂದು ತಿಳಿದ ಮುಶ್ರಿಕರು ಅವರನ್ನು ಅಲ್ಲಿಂದ ಮರಳಿ ಕರೆತರುವ ತಂತ್ರಗಳನ್ನು ಹೂಡಿದರು. ಆ ದೇಶದ ರಾಜನಿಗೆ ಮತ್ತು ಗಣ್ಯ ನಾಯಕರಿಗೆ ಕಪ್ಪ-ಕಾಣಿಕೆಗಳನ್ನು ನೀಡಿ ಮನವೊಲಿಸುವುದಕ್ಕಾಗಿ ಅಮ್ರ್ ಬಿನ್ ಆಸ್ ಮತ್ತು ಅಬ್ದುಲ್ಲಾ ಬಿನ್ ಅಬೀ ರಬೀಅರನ್ನು ಅಲ್ಲಿಗೆ ಕಳುಹಿಸಿದರು. ಅವರು ರಾಜನ ಬಳಿಗೆ ಹೋಗಿ ಮುಸ್ಲಿಮರ ಕುರಿತು ಸುಳ್ಳು ಹೇಳಿದರು. ಮುಸ್ಲಿಮರು ನಮ್ಮ ದೇಶದಲ್ಲಿ ಗಲಭೆಕೋರರಾಗಿದ್ದರು. ಅವರು ನಮ್ಮ ಪೂರ್ವಜರ ಧರ್ಮವನ್ನು ತಿರಸ್ಕರಿಸಿದ್ದಾರೆ. ಅವರನ್ನು ನಮ್ಮ ದೇಶಕ್ಕೆ ಮರಳಿಸಬೇಕೆಂದು ಬಿನ್ನವಿಸಿದರು. ಅದು ರಾಜ ದರ್ಬಾರಿನ ಗಣ್ಯರಿಗೂ ಒಪ್ಪಿಗೆಯಾಗಿತ್ತು. ರಾಜನು ಮುಸ್ಲಿಮರನ್ನು ಕರೆಸಿ, ಈ ಜನರು ಹೇಳುತ್ತಿರುವುದು ನಿಜವೇ ಎಂದು

ವಿಚಾರಿಸಿದನು. ಅದಕ್ಕೆ ಜಅ್‌ಫರ್ ಹೀಗೆ ಉತ್ತರಿಸಿದರು: "ನಾವು ಮೂರ್ತಿಗಳನ್ನು ಪೂಜಿಸುತ್ತಿದ್ದೆವು. ಸತ್ತ ಪ್ರಾಣಿಗಳನ್ನು ತಿನ್ನುತ್ತಿದ್ದೆವು. ಇತರ ಅನೇಕ ಕೆಡುಕುಗಳನ್ನು ಮಾಡುತ್ತಿದ್ದೆವು. ಇಂತಹ ಪರಿಸ್ಥಿತಿಯಲ್ಲಿ ಪ್ರವಾದಿವರ್ಯರು(ಸ) ಬಂದು ನಮ್ಮನ್ನು ಸತ್ಯದ ಹಾದಿಗೆ ಕರೆದರು. ಈಗ ನಾವು ಅಲ್ಲಾಹನನ್ನು ಮಾತ್ರ ಆರಾಧಿಸುತ್ತೇವೆ. ಕುಟುಂಬ ಸಂಬಂಧವನ್ನು ಬೆಳೆಸುತ್ತೇವೆ. ಅನಾಥರನ್ನು ಸಂರಕ್ಷಿಸುತ್ತೇವೆ. ಕಳವು, ಕೊಲೆ, ವಂಚನೆ, ಮೋಸ ಇತ್ಯಾದಿ ದುಷ್ಕೃತ್ಯಗಳನ್ನು ಮಾಡುವುದಿಲ್ಲ. ಇದಕ್ಕಾಗಿ ಅವರು ನಮ್ಮನ್ನು ಹಿಂಸಿಸುತ್ತಿದ್ದಾರೆ. ನಿಮ್ಮ ಬಳಿ ನ್ಯಾಯ ದೊರೆಯಬಹುದೆಂದು ನಾವು ಇಲ್ಲಿಗೆ ಬಂದಿದ್ದೇವೆ."

ಈ ಎಲ್ಲ ವಿಷಯಗಳನ್ನು ಕೇಳಿ ರಾಜನ ಮನ ಕರಗಿತು. ಕುರ್‌ಆನಿನ ಕೆಲವು ಭಾಗಗಳನ್ನು ಓದಿ ಹೇಳಲು ತಿಳಿಸಿದನು. ಆಗ ಮುಸ್ಲಿಮರು 'ಮರ್ಯಮ್' ಅಧ್ಯಾಯದ ಕೆಲವು ಭಾಗಗಳನ್ನು ಓದಿದರು. ಕ್ರೈಸ್ತನಾಗಿದ್ದ ರಾಜನಿಗೆ ಅದು ಸತ್ಯವೆಂದು ಮನವರಿಕೆಯಾಯಿತು. ಅವರು ಮುಶ್ರಿಕರು ನೀಡಿದ ಉಡುಗೊರೆಗಳನ್ನು ಹಿಂದಿರುಗಿಸಿ, ಮುಸ್ಲಿಮರನ್ನು ಅವರ ವಶ ಒಪ್ಪಿಸಲು ಸಾಧ್ಯವಿಲ್ಲವೆಂದು ತಿಳಿಸಿದರು. ಹೀಗೆ ಕುರೈಶರ ಪ್ರತಿನಿಧಿಗಳು ನಿರಾಶರಾಗಿ ಮರಳಿದರು.

••*•*•

13 ಉಮರ್ ಬಿನ್ ಖತ್ತಾಬ್(ರ)

ಮುಸ್ಲಿಮರನ್ನು ಅಬಿಸೀನಿಯಾದಿಂದ ಹಿಂದಕ್ಕೆ ಕರೆಸುವ ಕುರೈಶರ ಸಂಚು ವಿಫಲವಾಯಿತು. ಹಮ್ಝಾರಂತಹ(ರ) ಜನರು ಇಸ್ಲಾಮಿಗೆ ಬರುತ್ತಿದ್ದರು. ಇದನ್ನು ನೋಡಿ ವೈರಿಗಳ ವಿಶೇಷತಃ ಉಮರ್‌ರಂತಹ ಯುವಕರ ರೋಷ ಹೆಚ್ಚಿಸಿತು. ಪ್ರವಾದಿವರ್ಯರನ್ನು(ಸ) ಇನ್ನು ಸಹಿಸಲಾಗದೆಂದು ಉಮರ್ ನಿರ್ಧರಿಸಿದರು. ಉಮರ್ ಯಾರನ್ನೂ ಲೆಕ್ಕಿಸದ ವೀರ ಪರಾಕ್ರಮಿಯಾಗಿದ್ದರು. ಅವರು ಖಡ್ಗ ಹಿಡಿದು ಪ್ರವಾದಿವರ್ಯರನ್ನು(ಸ) ಕೊಲ್ಲಲು ಹೊರಟರು.

ದಾರಿಯಲ್ಲಿ ಸಂಬಂಧಿಕರಾದ ನಈಮ್ ಬಿನ್ ಅಬ್ದುಲ್ಲಾ ಭೇಟಿಯಾದರು. ಉಮರ್‌ರ ಉದ್ದೇಶವನ್ನು ತಿಳಿದು ನಈಮ್ ಹೀಗೆಂದರು: "ಮುಹಮ್ಮದ್‌ನನ್ನು ಕೊಂದರೆ ಬನೂ ಹಾಶಿಮ್ ಕುಟುಂಬ ಕೈಕಟ್ಟಿ ಕೂರಲಾರದು. ಮೊದಲು ನಿನ್ನ ಸಹೋದರಿ ಫಾತಿಮಾ ಮತ್ತು ಭಾವ ಸಈದ್ ಬಿನ್ ಝೈದ್‌ರನ್ನು ಸರಿ ಮಾಡು. ಅವರಿಬ್ಬರೂ ಮುಸ್ಲಿಮರಾಗಿದ್ದಾರೆ."

ಈ ಮಾತು ಕೇಳಿ ಉಮರ್‌ರ ಕೋಪ ನೆತ್ತಿಗೇರಿತು. ಅವರು ನೇರವಾಗಿ ಸಹೋದರಿಯ ಮನೆಗೆ ಹೋದರು. ಅಲ್ಲಿ ಖಬ್ಬಾಬ್ ಬಿನ್ ಅರತ್ ಎಂಬ ಸಹಾಬಿಯು ಫಾತಿಮಾರಿಗೆ ಕುರ್‌ಆನ್ ಓದಿ ಹೇಳುತ್ತಿದ್ದರು. ಉಮರ್ ದೂರದಿಂದಲೇ ಆ ಶಬ್ದವನ್ನು ಆಲಿಸಿದರು. ಉಮರ್‌ರನ್ನು ನೋಡಿದ ಕೂಡಲೇ ಖಬ್ಬಾಬ್ ಅಡಗಿಕೊಂಡರು. ಫಾತಿಮಾ ಕುರ್‌ಆನನ್ನು ಅಡಗಿಸಿಟ್ಟರು. ಉಮರ್, ಸಈದ್‌ರನ್ನು ಆಕ್ರಮಿಸಿದರು. ಫಾತಿಮಾರು ಪತಿಯನ್ನು ರಕ್ಷಿಸುವುದಕ್ಕಾಗಿ ಅಡ್ಡ ನಿಂತರು. ಖಡ್ಗದ ಏಟಿನಿಂದ ಅವರ ತಲೆಗೆ ಗಾಯವಾಯಿತು. ಸಹೋದರಿಯ ರಕ್ತ ನೋಡಿ ಉಮರ್‌ರ ಮನಸ್ಸು ಕರಗಿತು. ಅವರು ಶಾಂತರಾಗಿ ಕುರ್‌ಆನನ್ನು ಅಪೇಕ್ಷಿಸಿದರು. ಉಮರ್ ಸ್ನಾನ ಮಾಡಿದ ಬಳಿಕ ಫಾತಿಮಾರು ಅವರಿಗೆ ಕುರ್‌ಆನ್ ನೀಡಿದರು. ಅದರ ಕೆಲವು

ವಾಕ್ಯ ಓದಿದಾಗಲೇ ಉಮರ್‌ರ ಮನಸ್ಸು ಬದಲಾಯಿತು. ಅವರು ಪ್ರವಾದಿ ವರ್ಯರ(ಸ) ಬಳಿಹೋಗಿ ಇಸ್ಲಾಮ್ ಧರ್ಮ ಸ್ವೀಕರಿಸಲು ನಿರ್ಧರಿಸಿದರು.

ಉಮರ್ ತಮ್ಮತ್ತ ಬರುತ್ತಿರುವುದನ್ನು ನೋಡಿ ಸಹಾಬಿಗಳಿಗೆ ಸ್ವಲ್ಪ ಅಂಜಿಕೆಯಾಯಿತು. ಆದರೆ ಪ್ರವಾದಿವರ್ಯರು(ಸ) ಧೈರ್ಯದಿಂದ ಉಮರ್‌ರನ್ನು(ರ) ಸ್ವಾಗತಿಸಿದರು. ಉಮರ್ ನಡೆದ ಘಟನೆಯನ್ನು ತಿಳಿಸಿದರು. ಪ್ರವಾದಿವರ್ಯರು(ಸ) ಉಮರ್‌ರಿಗೆ(ರ) 'ಶಹಾದತ್ ಕಲಿಮ' ಹೇಳಿಕೊಟ್ಟರು.

ಉಮರ್‌ರಿಗೆ(ರ) ಸುಮ್ಮನಿರಲಾಗಲಿಲ್ಲ. ಇಸ್ಲಾಮಿನ ಮಹಾವೈರಿಯಾಗಿದ್ದ ಅಬೂಜಹಲ್‌ನ ಬಳಿ ಹೋಗಿ ತಾನು ಮುಸ್ಲಿಮನಾಗಿರುವ ವಿಚಾರವನ್ನು ತಿಳಿಸಿದರು. ಅಬೂಜಹಲ್ ಉಮರ್‌ರ(ರ) ಮಾವನಾಗಿದ್ದನು. ಅವನಿಗೆ ಧೈರ್ಯವಿದ್ದರೆ ಏನಾದರೂ ಮಾಡಲಿ ಎಂಬುದು ಉಮರ್‌ರ(ರ) ಇಂಗಿತವಾಗಿತ್ತು. ಅಬೂಜಹಲ್ ದಿಗ್ಭ್ರಾಂತನಾದನೇ ವಿನಾ ಏನೂ ಮಾಡಲಿಲ್ಲ. ಉಮರ್(ರ) ಇಸ್ಲಾಮಿಗೆ ಸೇರಿದ್ದರಿಂದ ಮುಸ್ಲಿಮರ ಧೈರ್ಯ ಹೆಚ್ಚಿತು. ಅವರು ಬಹಿರಂಗವಾಗಿ ನಮಾಝ್ ನಿರ್ವಹಿಸತೊಡಗಿದರು.

♦♦*♦*♦

14 ಬಹಿಷ್ಕಾರ

ಪ್ರವಾದಿತ್ವ ಲಭಿಸಿದ ಏಳು ವರ್ಷಗಳಲ್ಲಿ ಇಸ್ಲಾಮ್ ಬಹಳ ಪ್ರಬಲವಾಯಿತು. ಪ್ರವಾದಿ(ಸ) ಮತ್ತು ಅವರ ಕುಟುಂಬದ ವಿರುದ್ಧ ವೈರಿಗಳು ಕಟು ಧೋರಣೆಯನ್ನು ಅನುಸರಿಸಿದರು. ಅಬೂತಾಲಿಬ್ ಮತ್ತು ಅವರ ಕುಟುಂಬವನ್ನು ಬಹಿಷ್ಕರಿಸಿದರು. ಅವರಿಗೆ ತಮ್ಮ ಮಕ್ಕಳನ್ನು ವಿವಾಹ ಮಾಡಿಕೊಡುವುದಿಲ್ಲ. ಅವರ ಕುಟುಂಬದಿಂದಲೂ ಯಾರನ್ನೂ ವಿವಾಹವಾಗುವುದಿಲ್ಲ. ಅವರಿಗೆ ವಸ್ತುಗಳನ್ನು ಮಾರುವುದಿಲ್ಲ. ಅವರಿಂದ ಖರೀದಿಸುವುದಿಲ್ಲ. ಅವರಿಂದ ಎಲ್ಲ ಸಂಬಂಧವನ್ನೂ ಕಡಿದುಕೊಳ್ಳಲಾಗುವುದು ಎಂಬಿತ್ಯಾದಿ ವಿಷಯಗಳನ್ನು ಬರೆದ ಒಂದು ದಾಖಲೆಯನ್ನು ಅವರು ಕಅಬಾದ ಗೋಡೆಯಲ್ಲಿ ನೇತಾಡಿಸಿದರು.

ಬನೂ ಹಾಶಿಮ್ ಕುಟುಂಬವು ಸಂಪೂರ್ಣವಾಗಿ ಅಬೂತಾಲಿಬ್‌ರ ಬೆಂಬಲಕ್ಕೆ ನಿಂತಿತು. ಆದರೆ ಅಬೂಲಹಬ್ ಮಾತ್ರ ವೈರಿಗಳ ಪಾಳೆಯ ಸೇರಿದ್ದನು. ಈ ಬಹಿಷ್ಕಾರ ಮೂರು ವರ್ಷ ಮುಂದುವರಿಯಿತು. ಅಬೂತಾಲಿಬ್ ಮತ್ತು ಅವರ ಕುಟುಂಬವು ಬಹಳ ಕಷ್ಟ ಅನುಭವಿಸಿತು. ಆಹಾರ ದೊರೆಯದೆ ಉಪವಾಸ ವಿರಬೇಕಾಯಿತು. ಹಸಿವು ತಾಳಲಾಗದೆ ಹುಲ್ಲು ಎಲೆಗಳನ್ನು ತಿನ್ನಬೇಕಾಯಿತು. ರಾತ್ರಿ ವೇಳೆ ಯಾರಾದರೂ ಗುಪ್ತವಾಗಿ ತಂದುಕೊಡುವ ಆಹಾರ ಸಾಮಗ್ರಿ ಮತ್ತು ಬಟ್ಟೆಬರೆಗಳಿಂದ ಅವರು ಬದುಕಬೇಕಾಯಿತು.

ಬನೂ ಹಾಶಿಮ್ ಕುಟುಂಬದ ಸಂಕಷ್ಟಗಳನ್ನು ನೋಡಿದ ಕೆಲವು ಯುವಕರಿಗೆ ಕನಿಕರವುಂಟಾಯಿತು. ಅವರು ಸಭೆ ಸೇರಿದರು. ಈ ಬಹಿಷ್ಕಾರವನ್ನು ಹೇರುವುದು ಅನ್ಯಾಯ. ಅದನ್ನು ಕೊನೆಗೊಳಿಸಬೇಕೆಂದು ಅವರು ನಿರ್ಧರಿಸಿದರು. ಒಂದು ದಿನ ಅವರೆಲ್ಲರೂ ಕಅಬಾಕ್ಕೆ ಹೋದರು. ಝುಹೈರ್ ಬಿನ್ ಅಬೀ ಉಮಯ್ಯ ಎಂಬವರು ಅವರ ನಾಯಕರಾಗಿದ್ದರು. ಅವರು ಕಅಬಾ ಭವನಕ್ಕೆ ಪ್ರದಕ್ಷಿಣೆ ನಡೆಸಿದ ಬಳಿಕ

ಮಕ್ಕಾದವರನ್ನು ಕರೆದು ಹೀಗೆಂದರು: "ಮಕ್ಕಾದ ನಿವಾಸಿಗಳೇ, ನಾವೆಲ್ಲರೂ ಆಹಾರ ಪಾನೀಯಗಳನ್ನು ಸೇವಿಸುತ್ತೇವೆ, ಬಟ್ಟೆ ಬರೆಗಳನ್ನು ಧರಿಸುತ್ತೇವೆ. ಬನೂ ಹಾಶಿಮ್ ಕುಟುಂಬವು ಸಂಕಷ್ಟದಲ್ಲಿ ಬದುಕುತ್ತಿದೆ. ಇಲ್ಲಿ ತೂಗಾಡಿಸಿರುವ ದಾಖಲೆ ಪತ್ರವನ್ನು ನಾನು ಹರಿದು ಹಾಕುತ್ತೇನೆ. ಆಗ ಅಬೂಜಹಲ್, ಅವರನ್ನು ತಡೆಯಲು ಪ್ರಯತ್ನಿಸಿದನು. ಆದರೆ ಅನೇಕ ಯುವಕರು ಝುಹೈರ್‌ರನ್ನು ಬೆಂಬಲಿಸಿದರು. ಇದೊಂದು ಪೂರ್ವಯೋಜಿತ ಕಾರ್ಯಕ್ರಮವೆಂದು ಅಬೂಜಹಲ್‌ನಿಗೆ ಮನವರಿಕೆ ಯಾಯಿತು. ಅಷ್ಟರಲ್ಲಿ 'ಮುತ್‌ಯಿಮ್ ಬಿನ್ ಅದಿಯ್ಯ್' ಎಂಬವರು ಅದನ್ನು ಹರಿದೊಗೆಯಲು ಮುಂದಾದರು. ಆದರೆ, 'ಬಿಸ್ಮಿಲ್ಲಾಹ್' ಎಂಬ ಬರಹದ ಹೊರತು ಉಳಿದ ಭಾಗವನ್ನು ಆಗಲೇ ಗೆದ್ದಲು ತಿಂದು ಮುಗಿಸಿತ್ತು. ಈ ಘಟನೆಯಿಂದ ಮೂರು ವರ್ಷಗಳ ಬಹಿಷ್ಕಾರ ಕೊನೆಗೊಂಡಿತು.

♦♦*♦*♦

15 ದುಃಖದ ವರ್ಷ

ಪ್ರವಾದಿಯವರಿಗೆ(ಸ) ಅಬೂತಾಲಿಬ್ ಮಾತ್ರ ಆಸರೆಯಾಗಿದ್ದರೆಂದು ಈ ಹಿಂದೆ ಹೇಳಿದೆ. ಬನೂ ಹಾಶಿಮ್ ಕುಟುಂಬದ ಪ್ರಮುಖರಾಗಿದ್ದ ಅಬೂತಾಲಿಬ್‌ರಿಗೆ ಉನ್ನತ ಸ್ಥಾನಮಾನವಿತ್ತು. ಅವರ ಸಂರಕ್ಷಣೆಯಲ್ಲಿರುವ ಪ್ರವಾದಿಯವರನ್ನು(ಸ) ಕೊಲ್ಲಲು ಯಾರಿಗೂ ಧೈರ್ಯವಿರಲಿಲ್ಲ. ಅಬೂತಾಲಿಬ್ ಇಸ್ಲಾಮ್ ಧರ್ಮವನ್ನು ಸ್ವೀಕರಿಸದಿದ್ದರೂ ಪ್ರವಾದಿಯವರೊಂದಿಗೆ(ಸ) ಅವರಿಗೆ ಬಹಳ ಪ್ರೀತಿಯಿತ್ತು. ಅವರು ತಂದೆ-ತಾಯಿಗಳಿಲ್ಲದ ಕೊರತೆ ಅನುಭವಿಸದಂತೆ ಪ್ರವಾದಿವರ್ಯರನ್ನು(ಸ) ಬೆಳೆಸಿದ್ದರು. ಆದರೆ ಕುರೈಶರ ಬಹಿಷ್ಕಾರ ಇತ್ಯಾದಿಗಳಿಂದಾಗಿ ಅವರ ಆರೋಗ್ಯ ಹದಗೆಟ್ಟಿತು. ಪ್ರವಾದಿತ್ವದ ಹತ್ತನೆಯ ವರ್ಷ ಅವರು ನಿಧನರಾದರು.

ಅಬೂತಾಲಿಬ್‌ರ ನಿಧನದಿಂದ ಪ್ರವಾದಿವರ್ಯರಿಗೆ(ಸ) ತುಂಬಾ ತೊಂದರೆಯಾಯಿತು. ಈಗ ಕುರೈಶರು ಯಾರದೇ ಮುಲಾಜಿಲ್ಲದೆ ಹಿಂಸೆಗಳನ್ನು ತೀವ್ರಗೊಳಿಸಿದರು. ಪ್ರವಾದಿ(ಸ) ಮತ್ತು ಅನುಯಾಯಿಗಳು ಅಧಿಕ ಯಾತನೆಗಳಿಗೆ ಗುರಿಯಾದರು. ಅದೇ ವರ್ಷ ಪ್ರವಾದಿಯವರಿಗೆ(ಸ) ಇನ್ನೊಂದು ವಿಪತ್ತು ಬಂತು. ಪ್ರೀತಿಯ ಪತ್ನಿ ಖದೀಜಾ(ರ) ನಿಧನರಾದರು. ಖದೀಜಾ(ರ) ಎಲ್ಲ ಸಂಕಷ್ಟಗಳ ಪರಿಸ್ಥಿತಿಯಲ್ಲಿಯೂ ಪ್ರವಾದಿಯವರ(ಸ) ಜತೆ ನಿಂತು ಅವರನ್ನು ಸಮಾಧಾನ ಪಡಿಸುತ್ತಿದ್ದರು. ಅವರು ಇಸ್ಲಾಮಿಗಾಗಿ ವ್ಯಯಿಸಲಿಕ್ಕೆ ತಮ್ಮ ಸಕಲ ಸಂಪತ್ತನ್ನೂ ಪ್ರವಾದಿವರ್ಯರಿಗೆ(ಸ) ಒಪ್ಪಿಸಿದ್ದರು. ಪ್ರವಾದಿಯವರು(ಸ) ಅವರನ್ನು ಅಪಾರವಾಗಿ ಪ್ರೀತಿಸುತ್ತಿದ್ದರು.

ಅಬೂತಾಲಿಬ್‌ರ ಮರಣದ ಹಿಂದೆಯೇ ಖದೀಜಾರೂ(ರ) ಮರಣ ಹೊಂದಿದಾಗ ಪ್ರವಾದಿಯವರು(ಸ) ತೀವ್ರ ದುಃಖಿತರಾದರು. ಆದುದರಿಂದ 'ನುಬುವ್ವತ್'ನ ಹತ್ತನೆಯ ವರ್ಷವನ್ನು 'ದುಃಖದ ವರ್ಷ'ವೆಂದು ಕರೆಯಲಾಗುತ್ತಿದೆ.

ಖದೀಜಾರ(ರ) ಮರಣದ ತನಕ ಪ್ರವಾದಿಯವರು(ಸ) ಬೇರೆ ವಿವಾಹವಾಗಲಿಲ್ಲ. ಆಗ ಪ್ರವಾದಿಯವರಿಗೆ(ಸ) 50 ವರ್ಷ ವಯಸ್ಸಾಗಿತ್ತು. ಅವರ ಮರಣಾನಂತರವೂ ಪ್ರವಾದಿ ವರ್ಯರು(ಸ) ಅವರನ್ನು ಸದಾ ಸ್ಮರಿಸುತ್ತಿದ್ದರು.

♦♦*♦*♦

16 ತಾಯಿಫ್‌ನಲ್ಲಿ

ಮಕ್ಕಾದಿಂದ 89 ಕಿಲೋಮೀಟರ್ ದೂರದಲ್ಲಿ ತಾಯಿಫ್ ಎಂಬ ಊರಿದೆ. ಅಲ್ಲಿ ಸಕೀಫ್ ಗೋತ್ರದ ಜನರು ವಾಸವಾಗಿದ್ದರು. ಅವರಿಗೆ ಪ್ರವಾದಿಯವರೊಂದಿಗೆ(ಸ) ಕುಟುಂಬ ಸಂಬಂಧವಿತ್ತು. ಅಬೂತಾಲಿಬ್‌ರ ಮರಣದ ಬಳಿಕ ಕುರೈಶರ ಪ್ರತಿಭಟನೆ ಹೆಚ್ಚಿತು. ಆ ಹಂತದಲ್ಲಿ ತಾಯಿಫ್‌ನ ಜನರನ್ನು ಇಸ್ಲಾಮಿಗೆ ಆಹ್ವಾನಿಸೋಣವೆಂದು ಪ್ರವಾದಿವರ್ಯರು(ಸ) ನಿಶ್ಚಯಿಸಿದರು. ಹೀಗೆ ಅಬ್ಬಾಸ್‌ರ(ರ) ಸಲಹೆಯಂತೆ ಪ್ರವಾದಿವರ್ಯರು(ಸ) ತಾಯಿಫ್‌ಗೆ ಹೋದರು. ಜತೆಗೆ ಪ್ರವಾದಿಯವರ(ಸ) ಸಾಕುಪುತ್ರ 'ಝೈದ್ ಬಿನ್ ಹಾರಿಸ್(ರ)' ಕೂಡಾ ಇದ್ದರು.

ತಾಯಿಫ್‌ನ ಗಣ್ಯ ವ್ಯಕ್ತಿಗಳನ್ನು ಭೇಟಿಯಾಗಿ ಇಸ್ಲಾಮಿನ ಕರೆ ನೀಡಿದರು. ಆದರೆ ಅವರು ಅಲ್ಲಾಹನ ಧರ್ಮಕ್ಕೆ ಬರಲಿಲ್ಲ. ಅವರು ಪ್ರವಾದಿಯವರನ್ನು(ಸ) ಗೇಲಿ ಮಾಡಿ ಜರೆದರು. ಗೂಂಡಾಗಳನ್ನು ಮತ್ತು ಪೋಕರಿ ಹುಡುಗರನ್ನು ಕಳುಹಿಸಿ ಕಲ್ಲೆಸೆದು ಕೇಕೆ ಹಾಕಿಸಿದರು. ಕಲ್ಲೇಟಿನಿಂದ ಪ್ರವಾದಿಯವರ(ಸ) ಕಾಲಿಗೆ ಗಾಯವಾಗಿ ರಕ್ತ ಹರಿಯಿತು. ಜನರ ಅಜ್ಞಾನದಿಂದ ಪ್ರವಾದಿಯವರಿಗೆ(ಸ) ಮರುಕ ಹುಟ್ಟಿತು. ತನ್ನನ್ನು ಪೀಡಿಸಿದ ಜನರ ಬಗ್ಗೆ ಪ್ರವಾದಿಯವರಿಗೆ(ಸ) ಕೋಪ ಬರಲಿಲ್ಲ. ಅವರು ಅವಿವೇಕಿ ಜನರಿಗಾಗಿ ಹೀಗೆಂದು ಪ್ರಾರ್ಥಿಸಿದರು:

"ಓ ಅಲ್ಲಾಹ್! ನನ್ನ ಜನರನ್ನು ಕ್ಷಮಿಸಿ ಬಿಡು. ಅವರಿಗೆ ಯಾವ ತಿಳುವಳಿಕೆಯೂ ಇಲ್ಲ."

ಪ್ರವಾದಿಯವರು(ಸ) ಜನರನ್ನು ಎಷ್ಟೊಂದು ಪ್ರೀತಿಸುತ್ತಿದ್ದರೆಂದು ಇದರಿಂದ ಗ್ರಹಿಸಬಹುದು.

ಪ್ರವಾದಿಯವರು(ಸ) ತಾಯಿಫ್‌ನಿಂದ ಮಕ್ಕಾಕ್ಕೆ ಮರಳಿದರು. ಮಕ್ಕಾದಲ್ಲಿ ಮುತ್‌ಯಿಮ್ ಬಿನ್ ಅದಿಯ್ಯ್ ಎಂಬವರು ಪ್ರವಾದಿಯವರಿಗೆ(ಸ) ಆಶ್ರಯ ನೀಡಿದರು. ಯಾರ ಬೆಂಬಲ ವಿಲ್ಲದಿದ್ದರೂ ಇಸ್ಲಾಮೀ ಚಟುವಟಿಕೆಗಳನ್ನು ಮುನ್ನಡೆಸಲು ಪ್ರವಾದಿಯವರು(ಸ) ನಿರ್ಧರಿಸಿದರು. ವಿರೋಧಿಗಳಿಗೆ ಹೆದರಿ ಧರ್ಮ ಪ್ರಚಾರವನ್ನು ಕೈ ಬಿಡಲು ಪ್ರವಾದಿಯವರು(ಸ) ಒಪ್ಪಲಿಲ್ಲ.

••*•*•

17 ಇಸ್‌ರಾಅ್ ಮತ್ತು ಮಿಅ್‌ರಾಜ್

ಪ್ರವಾದಿಗಳೂ ಮಾನವರೇ ಆಗಿರುತ್ತಾರೆ. ಆದರೆ, ಅಲ್ಲಾಹನು ಅವರಿಗೆ 'ವಹ್ಯ್'(ದಿವ್ಯವಾಣಿ) ನೀಡಿರುತ್ತಾನೆ. ಅವರ ಮೂಲಕ ಅಲ್ಲಾಹನು ಅನೇಕ ಪವಾಡಗಳನ್ನು ತೋರಿಸುತ್ತಾನೆ. ಇದಕ್ಕೆ 'ಮುಅ್‌ಜಿಝಾತ್' ಎಂದು ಹೇಳುತ್ತಾರೆ. ಇದರಿಂದಾಗಿ ಜನರಿಗೆ ಅವರಲ್ಲಿ ವಿಶ್ವಾಸವುಂಟಾಗುತ್ತದೆ. ಇಸ್‌ರಾಅ್ ಮತ್ತು ಮಿಅ್‌ರಾಜ್‌ಗಳು ಅಂತಹ ಎರಡು ವಿಶೇಷ ಘಟನೆಗಳಾಗಿವೆ.

ಒಮ್ಮೆ ಪ್ರವಾದಿಯವರು(ಸ) ಕಅಬಾದ ಬಳಿ ವಿಶ್ರಾಂತಿ ಪಡೆಯುತ್ತಿದ್ದರು. ಆಗ ಜಿಬ್ರೀಲ್(ಅ) ಎಂಬ ದೇವಚರ ಪ್ರವಾದಿಯವರ(ಸ) ಬಳಿ ಬಂದರು. 'ಬುರಾಖ್' ಎಂಬ ಅದ್ಭುತ ಪ್ರಾಣಿಯನ್ನೂ ಜತೆಗೆ ಕರೆ ತಂದಿದ್ದರು. ಅದರ ಮೇಲೆ ಪ್ರವಾದಿಯವರನ್ನು(ಸ) ಕೂರಿಸಿ ಫೆಲೆಸ್ತೀನ್‌ನಲ್ಲಿರುವ 'ಬೈತುಲ್ ಮಕ್ದಿಸ್' ಎಂಬ ಮಸೀದಿಗೆ ಕರೆದುಕೊಂಡು ಹೋದರು. ಆ ಕಾಲದಲ್ಲಿ ಮಕ್ಕಾದಿಂದ ಅಲ್ಲಿಗೆ ಹೋಗಿ ಬರಲು ಎರಡು ತಿಂಗಳು ಹಿಡಿಯುತ್ತಿತ್ತು. ಆದರೆ ಒಂದೇ ರಾತ್ರಿಯಲ್ಲಿ ಈ ಘಟನೆ ನಡೆಯಿತು. ಈ ಯಾತ್ರೆಯನ್ನು 'ಇಸ್‌ರಾಅ್' ಎಂದು ಕರೆಯಲಾಗುತ್ತದೆ.

'ಬೈತುಲ್ ಮಕ್ದಿಸ್'ನಿಂದ ಪ್ರವಾದಿಯವರನ್ನು(ಸ) ಜಿಬ್ರೀಲ್(ಅ) ಆಕಾಶ ಲೋಕಕ್ಕೆ ಕರೆದೊಯ್ದರು. ಅಲ್ಲಿ ಪ್ರವಾದಿಯವರು(ಸ) ಆದಮ್, ಇಬ್ರಾಹೀಮ್, ಮೂಸಾ, ಈಸಾ ಮುಂತಾದ ಅನೇಕ ಪ್ರವಾದಿಗಳನ್ನು(ಅ) ನೋಡಿದರು. ಸ್ವರ್ಗ, ನರಕಗಳ ಅನೇಕ ವಿಷಯಗಳನ್ನು ಮನಗಂಡರು. ಅಲ್ಲಾಹನೊಡನೆ ಮಾತನಾಡಿದರು. ಆ ಸಂದರ್ಭದಲ್ಲಿಯೇ ನಮಾಝನ್ನು ಕಡ್ಡಾಯಗೊಳಿಸಲಾಯಿತು. ಈ 'ಆಕಾಶ ಯಾತ್ರೆ'ಯನ್ನು 'ಮಿಅ್‌ರಾಜ್' ಎನ್ನಲಾಗುತ್ತದೆ.

ಪ್ರವಾದಿಯವರು(ಸ) ಒಂದೇ ರಾತ್ರಿಯಲ್ಲಿ ಆ ಸ್ಥಳಗಳಿಗೆಲ್ಲಾ ಹೋಗಿ ಬಂದರೆಂಬ ಸುದ್ದಿಯನ್ನು ಖುರೈಶರು ನಂಬಲಿಲ್ಲ. ಅವರು ಪ್ರವಾದಿಯೊಡನೆ(ಸ) ಅನೇಕ ಪ್ರಶ್ನೆಗಳನ್ನು

ಕೇಳಿದರು. ಅದಕ್ಕಿಂತ ಮುಂಚೆ 'ಬೈತುಲ್ ಮಕ್ದಿಸ್'ಗೆ ಭೇಟಿ ನೀಡಿ ಪರಿಚಯವಿದ್ದ ಜನರು ಅಲ್ಲಿನ ಹಲವು ವಿಷಯಗಳನ್ನು ಪ್ರವಾದಿ ಯವರೊಡನೆ(ಸ) ವಿಚಾರಿಸಿದರು. ಪ್ರವಾದಿಯವರು(ಸ) ಎಲ್ಲರಿಗೂ ಸರಿಯಾದ ಉತ್ತರವನ್ನು ನೀಡಿದರು. ಆದರೂ ಅವರು ಪ್ರವಾದಿಯವರನ್ನು(ಸ) ನಂಬಲಿಲ್ಲ. ಆದರೆ ಅಬೂಬಕರ್ ಸಿದ್ದೀಕ್(ರ) ಆ ಸುದ್ದಿ ಕೇಳಿದ ತಕ್ಷಣ ಅದನ್ನು ನಂಬಿದರು. ಪ್ರವಾದಿಯವರು(ಸ) ಅಲ್ಲಾಹನ ದೂತರು. ಅವರ ಮೂಲಕ ಹಲವು ಅದ್ಭುತಗಳು ನಡೆಯಬಹುದು. ಅವರು ಸರ್ವಥಾ ಸುಳ್ಳು ಹೇಳುವುದಿಲ್ಲ. ಎಂಬಿತ್ಯಾದಿ ವಿಷಯಗಳನ್ನು ಅಬೂಬಕರ್(ರ) ಅರಿತಿದ್ದರು. ಈ ಸಂದರ್ಭದಲ್ಲಿಯೇ ಪ್ರವಾದಿಯವರು(ಸ) ಅಬೂಬಕರ್‌ರಿಗೆ(ರ) 'ಸಿದ್ದೀಕ್' ಎಂಬ ಬಿರುದು ನೀಡಿದ್ದರು. 'ಸಿದ್ದೀಕ್' ಎಂದರೆ 'ಪರಮ ಸತ್ಯವಂತ.'

♦♦*♦*♦

18 ಮದೀನಾದಲ್ಲಿ ಇಸ್ಲಾಮ್

ಜನರನ್ನು ಇಸ್ಲಾಮ್ ಧರ್ಮಕ್ಕೆ ಕರೆಯುವ ಯಾವೊಂದು ಸಂದರ್ಭವನ್ನೂ ಪ್ರವಾದಿಯವರು(ಸ) ವ್ಯರ್ಥಗೊಳಿಸುತ್ತಿರಲಿಲ್ಲ. ವಿರೋಧಿಗಳಿಗೆ ಹೆದರಿ ಧರ್ಮ ಪ್ರಚಾರವನ್ನು ಕೈಬಿಡಲಿಲ್ಲ. ಹೀಗಿರುತ್ತಾ 'ನುಬುವ್ವತ್'ನ 12ನೆಯ ವರ್ಷದಲ್ಲಿ ಮದೀನಾದಿಂದ ಕೆಲವರು ಹಜ್ಜ್‌ಗಾಗಿ ಮಕ್ಕಾಕ್ಕೆ ಬಂದರು. ಪ್ರವಾದಿಯವರನ್ನು(ಸ) ಗುಪ್ತವಾಗಿ ಭೇಟಿಯಾದರು ಮತ್ತು ಅವರಿಗೆ ಇಸ್ಲಾಮಿನ ಪರಿಚಯ ಮಾಡಿಸಿದರು. ಶೀಘ್ರದಲ್ಲಿಯೇ ಓರ್ವ ಪ್ರವಾದಿ ಆಗಮಿಸಲಿರುವರೆಂದು ಮದೀನಾದವರು ಯಹೂದಿ ಮತ್ತು ಕ್ರೈಸ್ತರಿಂದ ಈ ಹಿಂದೆಯೇ ಕೇಳಿದ್ದರು.

ಪ್ರವಾದಿಯವರನ್ನು(ಸ) ಭೇಟಿಯಾಗಿ ಅವರೊಂದಿಗೆ ನಡೆಸಿದ ಸಂಭಾಷಣೆಯಿಂದ ಮುಂದೆ ಬರಲಿದ್ದಾರೆನ್ನಲಾದ ಪ್ರವಾದಿ ಇವರೇ ಎಂದು ಅವರಿಗೆ ಮನವರಿಕೆಯಾಯಿತು. ಅವರು ಮದೀನಾಕ್ಕೆ ಮರಳಿದ ಬಳಿಕ ಇತರರಿಗೆ ಇಸ್ಲಾಮಿನ ಸಂದೇಶವನ್ನು ತಲುಪಿಸಿದರು. ಹೀಗೆ ಅವರ ಮೂಲಕ ಅನೇಕ ಮಂದಿ ಪ್ರವಾದಿಯವರಲ್ಲಿ(ಸ) ವಿಶ್ವಾಸವಿರಿಸಿದರು.

ಮರುವರ್ಷ 73 ಪುರುಷರು ಮತ್ತು 3 ಮಹಿಳೆಯರ ತಂಡವು ಹಜ್ಜ್‌ಗಾಗಿ ಮಕ್ಕಾಕ್ಕೆ ಬಂತು. ಪ್ರವಾದಿಯವರು(ಸ) ಅವರನ್ನು ಭೇಟಿಯಾದರು ಮತ್ತು ಅವರೂ ಮುಸ್ಲಿಮರಾದರು. ಅವರು ಪ್ರವಾದಿಯವರನ್ನು(ಸ) ಮದೀನಾಕ್ಕೆ ಆಮಂತ್ರಿಸಿದರು. ಪ್ರವಾದಿಯವರನ್ನು(ಸ) ಕರೆದೊಯ್ಯುವುದಿದ್ದರೆ, ಅವರಿಗೆ ಸಂಪೂರ್ಣ ರಕ್ಷಣೆ ನೀಡಬೇಕು ಮತ್ತು ಅವರಿಗೆ ಅಗತ್ಯವಿರುವ ಸೌಲಭ್ಯಗಳನ್ನು ಒದಗಿಸಬೇಕೆಂದು ಚಿಕ್ಕಪ್ಪ ಅಬ್ಬಾಸ್‌ರು(ರ) ಅವರಿಗೆ ತಿಳಿಸಿದರು. ಅವರು ಎಲ್ಲಾ ರೀತಿಯ ಭದ್ರತೆಯ ವಾಗ್ದಾನ ನೀಡಿದರು.

ಮದೀನಾದಲ್ಲಿ ಇಸ್ಲಾಮ್ ಪ್ರಬಲವಾಯಿತು. ಔಸ್ ಮತ್ತು ಖಝ್ರಜ್ ಎಂಬ ಗೋತ್ರಗಳು ಇಸ್ಲಾಮ್ ಸ್ವೀಕರಿಸಿದುವು. ಮದೀನಾಕ್ಕೆ ವಲಸೆ ಹೋದವರನ್ನು 'ಮುಹಾಜಿರ್'ಗಳೆಂದೂ ಅವರಿಗೆ ನೆರವಾದ ಮದೀನಾ ನಿವಾಸಿಗಳನ್ನು 'ಅನ್ಸಾರ್' ಎಂದೂ ಕರೆಯಲಾಗುತ್ತದೆ.

ಮದೀನಾದಲ್ಲಿ ಮುಸ್ಲಿಮರು ಪ್ರಬಲರಾದರೆ ಅಪಾಯವೆಂದು ಕುರೈಶರು ಭಾವಿಸಿದರು. ಅವರು ಪ್ರವಾದಿಯವರನ್ನು(ಸ) ಕೊಲ್ಲಲು ನಿರ್ಧರಿಸಿದರು. ಅಬೂಜಹಲ್‌ನ ಅಭಿಪ್ರಾಯದಂತೆ ಪ್ರತಿಯೊಂದು ಮನೆತನದಿಂದ ಒಬ್ಬೊಬ್ಬ ಧೀರ ಯುವಕನನ್ನು ಆಯ್ಕೆ ಮಾಡಲಾಯಿತು. ಅವರೆಲ್ಲರೂ ಜತೆಗೂಡಿ ಒಂದು ರಾತ್ರಿ ಪ್ರವಾದಿಯವರ(ಸ) ಮನೆಗೆ ಮುತ್ತಿಗೆ ಹಾಕಿದರು. ಆದರೆ, ಅಲ್ಲಾಹನು ಈ ಸಂಚನ್ನು ಪ್ರವಾದಿಯವರಿಗೆ(ಸ) ಮೊದಲೇ ತಿಳಿಸಿದನು. ಆದುದರಿಂದ ಅಲೀಯವರನ್ನು(ರ) ಹಾಸಿಗೆಯಲ್ಲಿ ಮಲಗಿಸಿ ಯಾರಿಗೂ ತಿಳಿಯದಂತೆ ಪ್ರವಾದಿಯವರು(ಸ) ಅಲ್ಲಿಂದ ಪಾರಾದರು.

♦♦*♦*♦

19 ಪ್ರವಾದಿವರ್ಯರ(ಸ) ಹಿಜ್ರತ್

ಪ್ರವಾದಿವರ್ಯರು(ಸ) ನೇರವಾಗಿ ಅಬೂಬಕರ್ ಸಿದ್ದೀಕ್(ರ) ಮನೆಗೆ ಹೋದರು. ಅವರೂ ಒಟ್ಟಿಗೆ ಹೊರಟರು. ಇಬ್ಬರೂ 'ಸೌರ್' ಗುಹೆಯಲ್ಲಿ ಅಡಗಿ ಕುಳಿತರು. ಪ್ರವಾದಿ(ಸ) ಮತ್ತು ಸಿದ್ದೀಕ್‌ರು ತಪ್ಪಿಸಿಕೊಂಡಿರುವುದನ್ನು ತಿಳಿದು ಮುಶ್ರಿಕರ ಕೋಪ ಇಮ್ಮಡಿಸಿತು. ಪ್ರವಾದಿಯವರನ್ನು(ಸ) ಪತ್ತೆ ಹಚ್ಚುವವರಿಗೆ ನೂರು ಒಂಟೆಗಳನ್ನು ಬಹುಮಾನ ನೀಡುವುದಾಗಿ ಸಾರಿದರು. ಜನರು ಎಲ್ಲ ಕಡೆ ಹುಡುಕ ತೊಡಗಿದರು. ಪ್ರವಾದಿಯವರಿದ್ದ ಗುಹೆಯ ಸಮೀಪಕ್ಕೂ ಅವರು ತಲಪಿದ್ದರು. ವೈರಿಗಳು ಪ್ರವಾದಿಯವರನ್ನು(ಸ) ನೋಡಿ ಬಿಡುವರೋ ಎಂದು ಸಿದ್ದೀಕ್‌ರಿಗೆ ಅಂಜಿಕೆಯಾಯಿತು. "ಹೆದರಬೇಡಿ, ಅಲ್ಲಾಹನು ನಮ್ಮ ಜೊತೆಗಿದ್ದಾನೆ" ಎಂದು ಅವರನ್ನು ಪ್ರವಾದಿ(ಸ) ಸಮಾಧಾನ ಮಾಡಿದರು. ಅಲ್ಲಾಹನ ಅನುಗ್ರಹದಿಂದ ವೈರಿಗಳಿಗೆ ಪ್ರವಾದಿಯವರನ್ನು(ಸ) ಪತ್ತೆ ಹಚ್ಚಲಾಗಲಿಲ್ಲ.

ಪ್ರವಾದಿ(ಸ) ಮತ್ತು ಅಬೂಬಕರ್ ಸಿದ್ದೀಕ್(ರ) ಮೂರು ದಿನಗಳ ಕಾಲ ಗುಹೆಯಲ್ಲಿಯೇ ಉಳಿದರು. ಅಬೂಬಕರ್‌ರ(ರ) ಪುತ್ರ ಅಬ್ದುಲ್ಲಾರು ವೈರಿಗಳ ಚಲನವಲನಗಳ ಕುರಿತು ರಾತ್ರಿ ಗುಹೆಗೆ ಬಂದು ತಿಳಿಸುತ್ತಿದ್ದರು. ಪುತ್ರಿ ಅಸ್ಮಾ ಆಹಾರ ತಂದು ಕೊಡುತ್ತಿದ್ದರು. ವೈರಿಗಳ ಶೋಧ ಕಾರ್ಯವು ಕಡಿಮೆಯಾದಾಗ ಪ್ರವಾದಿ(ಸ) ಮತ್ತು ಅಬೂಬಕರ್ ಸಿದ್ದೀಕ್(ರ) ದಾರಿ ಸೂಚಕನ ಜತೆ ಮದೀನಾಕ್ಕೆ ಹೊರಟರು.

ಪ್ರವಾದಿಯವರು(ಸ) ಮಕ್ಕಾದಿಂದ ಹೊರಟಿರುವರೆಂಬ ಸುದ್ದಿ ಮದೀನಾದ ಮುಸ್ಲಿಮರಿಗೆ ತಿಳಿದಿತ್ತು. ಆದರೆ ಮದೀನಾಕ್ಕೆ ಇನ್ನೂ ತಲಪದಿರುವುದರಿಂದ ಅವರಿಗೆ ಗಾಬರಿಯಾಯಿತು. ಜನರು ಪ್ರತಿದಿನವೂ ಪ್ರವಾದಿಯವರ(ಸ) ಆಗಮನವನ್ನು ನಿರೀಕ್ಷಿಸಿ ಬೆಟ್ಟದ ಮತ್ತು ಮರಗಳ ಮೇಲೆ ಕುಳಿತು ದಾರಿ ನೋಡುತ್ತಿದ್ದರು. ಹೀಗಿರಲು, ಪ್ರವಾದಿಯವರು(ಸ) ಮದೀನಾದ ಹತ್ತಿರ ಕುಬಾ ಎಂಬ ಸ್ಥಳಕ್ಕೆ ತಲಪಿರುವರೆಂಬ

ಸುದ್ದಿ ಬಂತು. ಮದೀನಾದ ಜನರು ಪ್ರವಾದಿಯವರ(ಸ) ಸ್ವಾಗತಕ್ಕಾಗಿ ಅಲ್ಲಿಗೆ ಧಾವಿಸಿದರು. ಅಲ್ಲಿ ಕೆಲವು ದಿನ ತಂಗಿದ ಪ್ರವಾದಿಯವರು(ಸ) ಒಂದು ಮಸೀದಿಯನ್ನು ನಿರ್ಮಿಸಿದರು. ಅದು ಇಸ್ಲಾಮ್‌ನಲ್ಲಿ ಪ್ರಥಮವಾಗಿ ನಿರ್ಮಿಸಿದ ಮಸೀದಿಯಾಗಿದೆ. ಇದರಿಂದ ಮುಸ್ಲಿಮರಿಗೆ ನಿರ್ಭೀತಿಯಿಂದ ನಮಾಝ್ ಮಾಡುವ ಅವಕಾಶ ಸಿಕ್ಕಿತು.

ಕೆಲವು ದಿನಗಳ ಬಳಿಕ ಪ್ರವಾದಿಯವರು(ಸ) ಮದೀನಾಕ್ಕೆ ಹೋದರು. ಮದೀನಾದ ಮಹಿಳೆಯರು ಮತ್ತು ಮಕ್ಕಳೆಲ್ಲರೂ ಪ್ರವಾದಿಯವರನ್ನು(ಸ) ಹರ್ಷದಿಂದ ಹಾಡುತ್ತಾ ಸ್ವಾಗತಿಸಿದರು.

ಪ್ರವಾದಿಯವರನ್ನು(ಸ) ಸತ್ಕರಿಸಲು ಪರಸ್ಪರ ಪೈಪೋಟಿ ನಡೆಸಿದರು. ಅವರು ಪ್ರವಾದಿಯವರ(ಸ) ಒಂಟೆಯ ಮೂಗು ದಾರ ಹಿಡಿದು ಎಳೆಯಲಾರಂಭಿಸಿದರು. ಒಂಟೆಯು ತನ್ನಷ್ಟಕ್ಕೆ ಹೋಗಿ ಎಲ್ಲಿ ನಿಲ್ಲುವುದೋ ಅಲ್ಲಿ ತಂಗುವನೆಂದು ಪ್ರವಾದಿ(ಸ) ಹೇಳಿದರು. ಅಬೂ ಅಯ್ಯೂಬ್ ಅನ್ಸಾರಿ ಎಂಬವರ ಮನೆಯ ಸಮೀಪ ಒಂಟೆ ನಿಂತಿತು. ಪ್ರವಾದಿಯವರು(ಸ) ಅವರ ಅತಿಥಿಯಾಗಿ ಏಳು ತಿಂಗಳ ಕಾಲ ನಿಂತರು. ತನ್ಮಧ್ಯೆ ಮದೀನಾದ ಮಸೀದಿ ಮತ್ತು ಅದರ ಸಮೀಪ ಪ್ರವಾದಿಯವರಿಗೆ(ಸ) ಮನೆಯನ್ನೂ ಕಟ್ಟಲಾಯಿತು. ತರುವಾಯ ಮಕ್ಕಾದಿಂದ ಕುಟುಂಬವನ್ನು ಕರೆಸಿ ತಮ್ಮ ಮನೆಯಲ್ಲಿ ವಾಸ ಹೂಡಿಸಿದರು.

****

ಮಾದರಿ ಪ್ರಶ್ನೆಗಳು

I. ಬಿಟ್ಟ ಪದಗಳನ್ನು ಸೇರಿಸಿರಿ.

1) ಪ್ರವಾದಿ(ಸ) ....ನೆಯ ಇಸವಿಯಲ್ಲಿ ಜನಿಸಿದರು.

2) ಪ್ರವಾದಿಯ ತಂದೆ..................ಮತ್ತು ತಾಯಿ ....

3) ಪ್ರವಾದಿಯವರು(ಸ) ಮೊಲೆ ಹಾಲು ಕುಡಿಯಲಿಕ್ಕಾಗಿ................ವರ್ಷ ....ರ ಜೊತೆ ವಾಸವಾಗಿದ್ದರು.

4) ತಾಯಿಯ ಮರಣದ ಬಳಿಕ ಪ್ರವಾದಿಯವರನ್ನು...................ರು ಪೋಷಿಸಿದರು.

5) ಪ್ರವಾದಿಯವರು(ಸ) ವ್ಯಾಪಾರಕ್ಕಾಗಿ................................ಎಂಬ ದೇಶಕ್ಕೆ ಹೋಗುತ್ತಿದ್ದರು.

6) ಪ್ರವಾದಿಯವರು(ಸ)...............................ನೆಯ ವಯಸ್ಸಿನಲ್ಲಿ ....ರನ್ನು ವಿವಾಹವಾದರು.

II ತಪ್ಪು ಮತ್ತು ಸರಿ ಗುರುತಿಸಿರಿ.

1) 'ಹಜರುಲ್ ಅಸ್ವದ'ನ್ನು ಯಥಾಸ್ಥಾನದಲ್ಲಿ ಇರಿಸುವ ಕುರಿತು ಕುರೈಶರಲ್ಲಿ ವಿವಾದವುಂಟಾಯಿತು.

2) ಪ್ರವಾದಿಯವರು(ಸ) 'ನುಬುವ್ವತ್'(ಪ್ರವಾದಿತ್ವ)ಗಿಂತ ಮುಂಚೆ 'ಹಿರಾ' ಗುಹೆಗೆ ಹೋಗಿ ಧ್ಯಾನಿಸುತ್ತಿದ್ದರು.

3) 'ಫಾತಿಹಾ' ಎಂಬ ಅಧ್ಯಾಯ ಪ್ರವಾದಿಯವರಿಗೆ ಅವತೀರ್ಣಗೊಂಡ ಪ್ರಥಮ 'ವಹ್ಯ್' ಆಗಿದೆ.

4) ಅಬೂತಾಲಿಬ್ ಮತ್ತು ಖದೀಜಾರು ಒಂದೇ ವರ್ಷದಲ್ಲಿ ಮರಣ ಹೊಂದಿದರು.

III ಉತ್ತರ ಬರೆಯಿರಿ.

1) ಪ್ರವಾದಿಯವರಿಗೆ(ಸ) ಖದೀಜಾರಲ್ಲಿ ಜನಿಸಿದ ಮಕ್ಕಳು ಯಾರು?

2) 'ಹಜರುಲ್ ಅಸ್ವದ'ನ್ನು ಯಥಾಸ್ಥಾನದಲ್ಲಿ ಇರಿಸುವ ವಿವಾದವನ್ನು ಪ್ರವಾದಿಯವರು(ಸ) ಹೇಗೆ ಬಗೆಹರಿಸಿದರು?

3) ಕುರೈಶರಿಂದ ಹಿಂಸೆಗೀಡಾದ ಕೆಲವು ಸಹಾಬಿಗಳ ಹೆಸರನ್ನು ಹೇಳಿರಿ?

4) ನಜ್ಜಾಶಿ ರಾಜರೊಡನೆ ಜಅ್‌ಫರ್ ಬಿನ್ ಅಬೀತಾಲಿಬ್ ಏನು ಹೇಳಿದರು?

5) ಕುರೈಶರು ಬಹಿಷ್ಕಾರ ಸಾರಿದ ಕಾಲದಲ್ಲಿ ಕಅಬಾದಲ್ಲಿ ತೂಗಾಡಿಸಲಾಗಿದ್ದ ದಾಖಲೆ ಪತ್ರದಲ್ಲಿ ಏನು ಬರೆಯಲಾಗಿತ್ತು?

6) ಇಸ್‌ರಾಅ್, ಮಿಅ್‌ರಾಜ್ ಅಥವಾ ಪ್ರವಾದಿಯವರ(ಸ) ಹಿಜ್ರತ್‌ನ(ವಲಸೆ) ಕುರಿತು ಬರೆಯಿರಿ.

IV ಘಟನೆಯ ಕಾಲಾನುಸಾರ ಸರಿಪಡಿಸಿ ಬರೆಯಿರಿ.

- ಹಂಝಾರಿಂದ ಇಸ್ಲಾಮ್ ಧರ್ಮ ಸ್ವೀಕಾರ
- ಅಬಿಸೀನಿಯಾಕ್ಕೆ 'ಹಿಜ್‌ರಾ'
- ದುಃಖದ ವರ್ಷ
- ಪ್ರವಾದಿಯವರ ಇಸ್‌ರಾಅ್, ಮಿಅ್‌ರಾಜ್
- ಉಮರ್‌ರ ಇಸ್ಲಾಮ್ ಧರ್ಮ ಸ್ವೀಕಾರ